ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

Volume: 05 ಸಂಪುಟ: 05 | Issue:57 ಸಂಚಿಕೆ: 57 | Date: 12-03-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ಅತಿಥಿ ಶಿಕ್ಷಕರ ವೇತನ ಬಂದ್ :ಬೋಧನೆಯ ಗುಣಮಟ್ಟ ಮತ್ತು ಮಕ್ಕಳ ಕಲಿಕೆಯ ಮೇಲೆ ಪರಿಣಾಮ

ಕರ್ನಾಟಕದ ಸುಮಾರು 51,000 ಅತಿಥಿ ಶಿಕ್ಷಕರಿಗೆ ನವೆಂಬರ್ 2025ರಿಂದ ವೇತನ ಪಾವತಿಯಾಗಿಲ್ಲ ಎಂಬ ಆರೋಪ ಕೇಳಿಬಂದಿದೆ. ತಿಂಗಳಿಗೆ 10–12 ಸಾವಿರ ರೂ.ಗಳ ವೇತನದಲ್ಲಿ ಜೀವನ ನಡೆಸುವ ಶಿಕ್ಷಕರಿಗೆ ನಾಲ್ಕು ತಿಂಗಳ ಸಂಬಳ ಬಾಕಿ ಉಳಿದಿರುವುದು ತೀವ್ರ ತೊಂದರೆ ತಂದಿದೆ. ಇದು ಬೋಧನೆಯ ಗುಣಮಟ್ಟ ಮತ್ತು ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಶಿಕ್ಷಣ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಸರ್ಕಾರ ಕೂಡಲೇ ಬಾಕಿ ವೇತನ ಬಿಡುಗಡೆ ಮಾಡುವಂತೆ ಆಗ್ರಹಿಸಲಾಗಿದೆ.



ರಾಜ್ಯದ ಪೊಲೀಸ್ ಸಿಬ್ಬಂದಿಗೆ ಕಳೆದ ತಿಂಗಳಿನ ಸಂಬಳ ಇನ್ನೂ ಆಗಿಲ್ಲ ಎಂಬ ವಿಚಾರವಾಗಿ ವಿಪಕ್ಷ ಬಿಜೆಪಿ ರಾಜ್ಯ ಸರ್ಕಾರದ ಮೇಲೆ ಮುಗಿಬಿದ್ದಿರುವ ನಡುವೆ ಮತ್ತೊಂದು ಆಘಾತಕಾರಿ ಸುದ್ದಿ ವರದಿಯಾಗಿದೆ. ಈ ಗಾಗಲೇ ಶಿಕ್ಷಕರ ಕೊರತೆಯಿಂದ ಬಳಲುತ್ತಿರುವ ಕರ್ನಾಟಕದ ಸರ್ಕಾರಿ ಶಾಲೆಗಳ ಸುಮಾರು 51,000 ಅತಿಥಿ ಶಿಕ್ಷಕರಿಗೆ (ಉಣಙಥಣ ಖಿಜಚಿಛಿಜಡಿ) 2025ರ ನವೆಂಬರ್‌ನಿಂದ ಇಂದಿನವರೆಗೆ ವೇತನ ಪಾವತಿಯಾಗಿಲ್ಲ ಎಂಬ ಆರೋಪ ಕೇಳಿಬಂದಿದೆ.

ಈ ಬಗ್ಗೆ ಮಾತನಾಡಿರುವ ಬೆಂಗಳೂರು ಲಿಂಕ್ ರೋಡ್‌ನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕಿ ಸುರೇಖಾ, ನಮ್ಮ ಬೋಧನಾ ಅನುಭವದ ಆಧಾರದ ಮೇಲೆ ನಮಗೆ ತಿಂಗಳಿಗೆ 10,000ರಿಂದ 12,000 ವರೆಗೆ ವೇತನ ನೀಡಲಾಗುತ್ತದೆ. ಆದರೆ ನವೆಂಬರ್‌ನಿಂದ ಇಂದಿನವರೆಗೆ ನಮಗೆ ವೇತನ ಸಿಕ್ಕಿಲ್ಲ. ಈ ಬಗ್ಗೆ ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘವು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಗೆ ಪತ್ರ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದಿದ್ದಾರೆ.

ಯಲಹಂಕದ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಮತ್ತೊಬ್ಬ ಶಿಕ್ಷಕರು ಮಾತನಾಡಿ, ನಾವು 12 ತಿಂಗಳು ಕೆಲಸ ಮಾಡಿದರೂ ನಮಗೆ 10 ತಿಂಗಳಷ್ಟೇ ವೇತನ ನೀಡಲಾಗುತ್ತದೆ. ಮಾರ್ಚ್ 31ರಂದು ನಮ್ಮ ಒಪ್ಪಂದ ಅವಧಿ ಮುಗಿಯುತ್ತದೆ. ನಂತರ ಶಾಲೆ ಹಾಗೂ ಇಲಾಖೆಯ ನಿರ್ಧಾರಕ್ಕೆ ಅನುಗುಣವಾಗಿ ನಮ್ಮ ಒಪ್ಪಂದವನ್ನು ನವೀಕರಿಸುವುದೋ ಅಥವಾ ಇಲ್ಲವೋ ಎಂಬುದು ತೀರ್ಮಾನವಾಗುತ್ತದೆ. ಸರ್ಕಾರ ಕನಿಷ್ಠ ನಮ್ಮ ಕಡಿಮೆ ವೇತನವನ್ನಾದರೂ ಸಮಯಕ್ಕೆ ಸರಿಯಾಗಿ ಪಾವತಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ನಡುವೆ ಶಿಕ್ಷಣ ತಜ್ಞ ಡಾ.ನಿರಂಜನಾರಾಧ್ಯ ವಿ.ಪಿ. ಅವರು ಅತಿಥಿ ಶಿಕ್ಷಕರ ವೇತನ ಪಾವತಿಗಾಗಿ ತಕ್ಷಣವೇ ನಿಧಿ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ. ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಶಿಕ್ಷಣದಲ್ಲಿ ಅತಿಥಿ ಶಿಕ್ಷಕರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಮೂರು ತಿಂಗಳಿಗೂ ಹೆಚ್ಚು ಕಾಲ ವೇತನ ಸಿಗದಿದ್ದರೆ ಅವರ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ಇದರಿಂದ ಬೋಧನೆಯ ಗುಣಮಟ್ಟಕ್ಕೂ ಪರಿಣಾಮ ಬೀಳಬಹುದು ಮತ್ತು ಮಕ್ಕಳ ಕಲಿಕೆಯ ಮಟ್ಟವೂ ಕುಸಿಯಬಹುದು ಎಂದು ಅವರು ತಿಳಿಸಿದ್ದಾರೆ.

## ತುಮಕೂರಿನಲ್ಲಿ ಡ್ರಗ್ಸ್ ಹಾವಳಿ– ಮೀಟರ್ ಬಡ್ಡಿದಂಧೆ ಹೆಚ್ಚಾಳ

## ಇದರಿಂದ ಕೊಲೆ, ಸುಲಿಗೆ ನಡೆಯುತ್ತಿವೆ ಅತೀಕ್ ಆಹಮ್ಮದ್






ತುಮಕೂರು: ತುಮಕೂರು ನಗರದಲ್ಲಿ ಡ್ರಗ್ಸ್ ಹಾವಳಿ ಮತ್ತು ಮೀಟರ್ ಬಡ್ಡಿದಂಧೆ ಹೆಚ್ಚಾಗಿದ್ದು, ಇದರಿಂದ ಕೊಲೆ, ಸುಲಿಗೆಗಳು ನಡೆಯುತ್ತಿದ್ದು, ಜಿಲ್ಲಾ ಪೊಲೀಸರು ತಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಹಾಗೂ ಮುಜಾಗ್ರತಾ ಕ್ರಮಗಳನ್ನು ವಹಿಸಬೇಕೆಂದು ಜಿಲ್ಲಾಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಮಾಜಿ ಅಧ್ಯಕ್ಷ ಆತೀಕ್ ಅಹಮದ್ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಟರ್ ಬಡ್ಡಿದಂಧೆ ಒಂದು ವರ್ಷ ಹಿಂದೆ ಸದಾಶಿವನಗರದ ಮಸೀದಿ ಹತ್ತಿರದಲ್ಲಿ ನಾಲ್ಕು ಜನರ ಒಂದು ಕುಟುಂಬ ಆತ್ಮಹತ್ಯೆಗೆ ಶರಣಾಗಿದ್ದನ್ನು ನಾವು ಕಾಣಬಹುದು. ಅದೇ ಬಡಾವಣೆಯಲ್ಲಿ ಮಂಗಳವಾರ ಕೆಲವರು ಕಾನೂನಿನ ಹೆದರಿಕೆಇಲ್ಲದೆ, ಒಬ್ಬ ವ್ಯಕ್ತಿಯನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾರೆ. ಈ ರೀತಿಯ ಅಪರಾಧಗಳಲ್ಲಿ ತೊಡಗುವವರಿಗೆ ಕಾನೂನಿನ ಭಯಇಲ್ಲದಿರುವುದೇ ಕಾರಣ. ಗೃಹ ಸಚಿವರ ಜಿಲ್ಲೆಯಲ್ಲಿಯೇ ಪರಿಸ್ಥಿತಿ ಈಗಾದರೆ, ಬೇರೆ ಜಿಲ್ಲೆಗಳ ಕಥೆ ಏನು ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತಿದ್ದು, ಜಿಲ್ಲಾಡಳಿತ ಮತ್ತುಜಿಲ್ಲಾ ಪೊಲೀಸರು,ಗೃಹ ಸಚಿವರ ಹೆಸರಿಗೆಕೆಟ್ಟ ಹೆಸರುತರದಂತೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕೆಂಬುದು ನಮ್ಮ ಒತ್ತಾಯವಾಗಿದೆ ಎಂದು ಅತೀಕ್‌ಅಹಮದ್ ತಿಳಿಸಿದ್ದಾರೆ.

ಈ ಹಿಂದೆ ಬೆಂಗಳೂರು, ಬಾಂಬೆ ಇಂತಹ ಕಡೆಗಳಲ್ಲಿ ಮಾತ್ರ ಗ್ಯಾಂಗ್ ವಾರಗಳನ್ನು ನಡೆಯುತ್ತವೇ ಎಂದು ಕೇಳೀದ್ದೆವು. ಆದರೆ ಇಂದು ತುಮಕೂರಿನಲ್ಲಿ ನಡೆಯುತ್ತಿದೆ. ರಾಜಾ ರೋಷವಾಗಿ ಮಚ್ಚು, ಲಾಂಗ್ ಹಿಡಿದು ಓಡಾಡುವವರ ಸಂಖ್ಯೆ ಹೆಚ್ಚಿದೆ. ಇದರಿಂದ ಜನರು ಭಯ ಭೀತಗೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ತುಮಕೂರು ನಗರವನ್ನುಗ್ರೇಟರ್ ತುಮಕೂರು ಮಾಡಲು ಅವಿರತ ಶ್ರಮಿಸುತ್ತಿದ್ದಾರೆ. ಆದರೆ ಯುವ ಜನರಲ್ಲಿ ಈ ರೀತಿಯ ವರ್ತನೆಯಿಂದ ಅಶಾಂತಿಯ ವಾತಾವರಣ ನಿರ್ಮಾಣವಾಗುವುದರಿಂದ ತುಮಕೂರು ಎಂದರೆ ಜನ ಭಯ ಪಡುವಂತಹ ಸ್ಥಿತಿ ನಿರ್ಮಾಣವಾಗಲಿದೆ. ಹಾಗಾಗಿ ಪೊಲೀಸರು ಎಚ್ಚೆತ್ತು ಕೊಂಡು, ಸಮಾಜ ವಿದ್ರೋಹಿ ಕೃತ್ಯಗಳನ್ನು ಎಸಗುವ ಜನರಿಗೆ,ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧಕಠಿಣ ಕಾನೂನು ಕ್ರಮ ಜರುಗಿಸುವ ಮೂಲಕ, ಇತರರುಇಂತಹ ಕೃತ್ಯಗಳಲ್ಲಿ ಭಾಗಿಯಾಗಲು ಹಿಂಜರಿಯುವಂತಹ ಸ್ಥಿತಿ ನಿರ್ಮಾಣ ಮಾಡಬೇಕೆಂದು ಆತೀಕ್‌ಅಹಮದ್ ಒತ್ತಾಯಿಸಿದ್ದಾರೆ.

ಸದಾಶಿವನಗರದಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಪ್ರಮುಖ ಕಾರಣ ಹಣದ ವ್ಯವಹಾರ ಎನ್ನಲಾಗುತ್ತಿದೆ. ಮೀಟರ್ ಬಡ್ಡಿದಂಧೆ ಹೆಚ್ಚಾಗಿದೆ ಎಂಬುದು ಸಾರ್ವಜನಿಕರ ದೂರಾಗಿದೆ. ಸದಾಶಿವನಗರದ ಗಲ್ಲಿ ಗಲ್ಲಿಗಳಲ್ಲಿ ಅನಾಯಾಸವಾಗಿ ಡ್ರಗ್ಸ್ ದೊರೆಯತ್ತಿದೆ. ಇದಕ್ಕೆ ಯುವ ಜನರು ಬಲಿಯಾಗುತ್ತಿದ್ದಾರೆ .ವಯಸ್ಸಿಗೆ ಬಂದ ಮಗನನ್ನು ಕಳೆದುಕೊಂಡ ಕುಟುಂಬಗಳು ಆನಾಥವಾಗುತ್ತಿವೆ. ಹಾಗಾಗಿ ಜಿಲ್ಲಾಡಳಿತ ಮತ್ತುಜಿಲ್ಲಾ ಪೊಲೀಸ್ ಇಲಾಖೆ ಕಟ್ಟು ನಿಟ್ಟಿನ ಕ್ರಮಜರುಗಿಸ ಬೇಕೆಂದು ಆಗ್ರಹಿಸುತ್ತೇನೆ ಎಂದು ಅತೀಕ್‌ಅಹಮದ್

## ಸಾಕ್ಷಿ ಬೀಡದೆ ಕದ್ದ ಕಳ್ಳರು.. ತಡರಾತ್ರಿ ಖತರ್ನಾಕ್ ಕಳ್ಳರ ಕೈ ಚಳಕ...

## ವಡ್ಡಗೆರೆ ವೀರನಾಗಮ್ಮ ದೇವಾಲಯದಲ್ಲಿ 30ಕೆ.ಜಿ ಬೆಳ್ಳಿ, 8 ಗ್ರಾಂ ಅಧಿಕ ಬಂಗಾರ ಕಳವು



ಕೊರಟಗೆರೆ: ಇತಿಹಾಸ ಪ್ರಸಿದ್ದ ವಡ್ಡಗೆರೆ ಶ್ರೀವೀರನಾಗಮ್ಮ ತಾಯಿಯ ದೇವಸ್ಥಾನದಲ್ಲಿ ಸಿನಿಮಯ ರೀತಿಯಲ್ಲಿ ಕಳ್ಳತನಕ್ಕೆ ಯತ್ನಿಸಿ 30 ಕೆ.ಜಿ ಗೂ ಅಧಿಕ ಬೆಳ್ಳಿ, 5ಕ್ಕೂ ಅಧಿಕ ಗ್ರಾಂ ಬಂಗಾರ ಸೇರಿ ಸುಮಾರು ಒಂದು ಕೋಟಿ ಅಧಿಕ ಬೆಲೆ ಬಾಳುವ ಒಡವೆಗಳನ್ನು ಕದ್ದು ಪರಾರಿಯಾಗಿರುವ ಘಟನೆ ಕೊರಟಗೆರೆ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ತಾಲೂಕಿನ ಕಸಬಾ ಹೋಬಳಿ ವಡ್ಡಗೆರೆ ಗ್ರಾಮದಲ್ಲಿನ ಶ್ರೀವೀರನಾಗಮ್ಮ ದೇವಾಲಯದಲ್ಲಿ ತಡರಾತ್ರಿ ಖತರ್ನಾಕ್ ಕಳ್ಳರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಗ್ಯಾಸ್ ಕಟರ್ ಬಳಸಿ ದೇವಸ್ಥಾನದ ಬಾಗಿಲು ಕಟ್ ಮಾಡಿ ಕಳ್ಳತನ ಮಾಡಿದ್ದಾರೆ, ಸಿಸಿಟಿವಿ ಕ್ಯಾಮೆರಾ ಡಿವಿಆರ್ ಕೂಡ ಒತ್ತೊಯ್ದಿದ್ದಾರೆ ಎಂದು ದೇವಾಲಯದ ಪ್ರಧಾನ ಅರ್ಚಕ ಮಾಹಿತಿ ಹಂಚಿಕೊಂಡಿದ್ದಾರೆ.

ಪ್ರತಿನಿತ್ಯದಂತೆ ಬೆಳಗ್ಗೆ ದೇವಸ್ಥಾನದ ಪೂಜೆಗೆ ಬಂದ ಅರ್ಚಕರಿಗೆ ಕಳ್ಳತನವಾಗಿರುವ ಕಂಡು ಬಂದಿದ್ದು ಕೂಡಲೇ ಪೋಲಿಸ್ ಇಲಾಖೆ ಅಧಿಕಾರಿಗಳಿಗೆ ಮತ್ತು ಮುಜುರಾಯಿ ಇಲಾಖೆಗೆ ಮಾಹಿತಿ ತಿಳಿಸಿದ್ದು, ತಾಯಿ ಜಾತ್ರೆಗೆಒಂದು ವಾರವಷ್ಟೇ ಬಾಕಿಯಿತ್ತು, ಪೋಲಿಸ್ ಡಾಗ್ ಸ್ಕೋರ್ಡ್ ಮತ್ತು ಬೆರಳಚ್ಚು ತನಿಖಾ ತಂಡಸ್ಥಳಕ್ಕೆ ಭೇಟಿ ನೀಡಿ ದೇವಸ್ಥಾನದ ಸುತ್ತಮುತ್ತ ಕಾರ್ಯಾಚರಣೆ ನಡೆಸಿದ್ದು,ಕಳ್ಳತನವಾಗಿರುವ ವಿಷಯ ತಿಳಿದ ಗ್ರಾಮಸ್ಥರು ದೇವಸ್ಥಾನ ಸುತ್ತುವರೆದು ಕುತೂಹಲದಿಂದ ನೋಡುತ್ತಿರುವುದು ಕಂಡುಬಂದಿತು.

ಪೋಲಿಸರಿಗೆ ಸವಾಲಾಗಿದ್ಯಾ ಈ ಪ್ರಕರಣ?: ತಡರಾತ್ರಿ ವಡ್ಡಗೆರೆ ಶ್ರೀವೀರನಾಗಮ್ಮ ದೇವಾಲಯದಲ್ಲಿ ನಡೆದ ಕಳ್ಳತನ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ತುಮಕೂರು ಎಸ್ಪಿ ಅಶೋಕ್ ವೆಂಕಟ್ ಪರಿಶೀಲಿಸಿಕಳ್ಳತನ ಪ್ರಕರಣ ಪತ್ತೆಗೆ ವಿಶೇಷ ತಂಡ ರಚಿಸಿದ್ದು, ಅಡಿಷನಲ್ ಎಸ್ಪಿ ಪುರುಷೋತ್ತಮ್, ಮಧುಗಿರಿಡಿವೈಎಸ್ಪಿ ಮಂಜುನಾಥ್, ತಹಶೀಲ್ದಾರ್ ಮಂಜುನಾಥ್, ಸಿಪಿಐ ಅನಿಲ್, ಪಿಎಸ್‌ಐ ತೀರ್ಥೇಶ್ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದು ಈ ಪ್ರಕರಣ ಪೋಲಿಸ್ ಇಲಾಖೆಗೆ ಸವಾಲಾಗಿದೆ ಎಂಬುದು ಪ್ರಜ್ಞಾವಂತ ನಾಗರೀಕರ ಅಭಿಪ್ರಾಯ.



## ಋತು ಚಕ್ರ ರಕ್ತಸ್ರಾವ ನೋವು ತಾಳಲಾರದೆ ತಾಯಿ ಮತ್ತು ಮಗು ನೇಣು ಶರಣು

ವರದಿ ಗುಬ್ಬಿ ಭರತ್

ಗುಬ್ಬಿ : ಸೀರೆ ಮೂಲಕ ಎರಡು ವರ್ಷದ ಮಗುವಿಗೆ ನೇಣು ಹಾಕಿದ ತಾಯಿಯೊಬ್ಬಳು ಅದೇ ಸೀರೆಗೆ ತಾನೂ ನೇಣಿಗೆ ಶರಣಾದ ಹೃದಯ ವಿದ್ರಾವಕ ಧಾರುಣ ಘಟನೆ ಗುಬ್ಬಿ ತಾಲೂಕಿನ ಹಾಗಲವಾಡಿ ಗ್ರಾಮದಲ್ಲಿ ನಡೆದಿದೆ.

ಹಾಗಲವಾಡಿ ಗ್ರಾಮದ ನಿವಾಸಿ ಯತೀಶ್ ಎಂಬುವರ ಪತ್ನಿ ಗಂಗಾಮಣಿ (29), ಆಕೆಯ 2 ವರ್ಷದ ಮಗು ಪ್ರೇಕ್ಷ ಎಂಬ ಇಬ್ಬರು ನೇಣು ಬಿಗಿದುಕೊಂಡು ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ತಾಯಿ ತನ್ನ ಮಗುವಿನೊಂದಿಗೆ ಮನೆಯ ಚಾವಣಿಗೆ ಸೀರೆಯಲ್ಲಿ ನೇಣು ಬಿಗಿದುಕೊಂಡ ಸಾವಿನ ಸುದ್ದಿ ತಿಳಿದ ಕೂಡಲೇ ಗ್ರಾಮಸ್ಥರಲ್ಲಿ ಬರಸಿಡಿಲು ಬಡಿದಂತಾಗಿದೆ. ಆತ್ಮಹತ್ಯೆ ಬಗೆಗಿನ ನಿಖರ ಕಾರಣ ತಿಳಿದುಬಂದಿದೆ.

ತಿಪಟೂರು ಮೂಲದ ಜಕ್ಕನಹಳ್ಳಿ ಗ್ರಾಮದ ದ್ರಾಕ್ಷಾಯಣಮ್ಮ ಮತ್ತು ಶಿವಣ್ಣ ಎಂಬ ದಂಪತಿಗಳ ಮೃತ ಮಗಳು ಗಂಗಾಮಣಿ ಕಳೆದ 9 ವರ್ಷಗಳ ಹಿಂದೆ ಗುಬ್ಬಿ ತಾಲೂಕಿನ ಹಾಗಲವಾಡಿ ಗ್ರಾಮದ ಯತೀಶ್ ಜೊತೆ ಮದುವೆಯಾಗಿದ್ದು ಇವರಿಗೆ 8 ವರ್ಷದ ಮಗ ವಿನಯ್, 5 ವರ್ಷದ ಮಗಳು ರಕ್ಷಿತಾ, ಇನ್ನು 2 ವರ್ಷದ ಮಗಳು ಪ್ರೇಕ್ಷ ಎಂಬ ಮೂರು ಮಕ್ಕಳಿದ್ದರು.

ಋತುಚಕ್ರ ಸಮಯದಲ್ಲಿ ಹೆಚ್ಚಿನ ರಕ್ತಸ್ರಾವವಾಗುತ್ತದೆ ಎಂದು ಅನೇಕ ಬಾರಿ ಚಿಕಿತ್ಸೆ ಪಡೆದರೂ ಕೂಡ ಗುಣಮುಖವಾಗದೆ ಮನನೊಂದು ಎರಡು ವರ್ಷದ ಮಗುವಿನೊಂದಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತ ಗಂಗಾಮಣಿ ತಾಯಿ ದ್ರಾಕ್ಷಾಯಣಮ್ಮ ಚೇಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಗಂಗಾಮಣಿಗೆ ಹೊಟ್ಟೆ ನೋವು ತಾಳಲಾರದೆ ಆತ್ಮಹತ್ಯೆಗೆ ಶರಣಾಗಿದ್ದರೂ ಎರಡು ವರ್ಷದ ಪುಟ್ಟ ಮಗುವನ್ನು ನೇಣಿಗೆ ಹಾಕಿರುವುದು ಸ್ಥಳೀಯರಲ್ಲಿ ಅನುಮಾನ ಮೂಡಿಸಿದೆ. ಈ ಎರಡು ಜೀವದ ಆತ್ಮಹತ್ಯೆಯ ಬಗೆಗಿನ ಸತ್ಯಾಸತ್ಯತೆ ಪೊಲೀಸರ ತನಿಖೆಯಿಂದ ಹೊರಬರಬೇಕಿದೆ.

ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಶಿರಾ ಉಪ ವಿಭಾಗದ ಡಿವೈಎಸ್ಪಿ ಶೇಖರ್ ಸೇರಿದಂತೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಮೃತ ದೇಹಗಳನ್ನ ಕೆಳಗಿಳಿಸಿ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಸಾಮ್ರಾಜ್ಯಶಾಹಿ ಶಕ್ತಿಗಳು ಶಸ್ತ್ರಾಸ್ತ್ರಗಳ ಮಾರುಕಟ್ಟೆ ವಿಸ್ತರಣೆಗಾಗಿ ಯುದ್ಧಗಳನ್ನು ಪ್ರಚೋದಿಸುತ್ತಿವೆ



ತುಮಕೂರು ನಗರದ ಟೌನ್ ಹಾಲ್ ಮುಂಭಾಗದಲ್ಲಿ ಇಂದು ಸಂಜೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಮತ್ತು ಜೀವ–ಜನಪರ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಆಯೋಜಿಸಲಾದ ವಿನಾಶಕಾರಿ ಯುದ್ಧ ವಿರೋಧಿ ಕ್ಯಾಂಡಲ್ ಲೈಟ್ ಪ್ರತಿಭಟನಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪರಿಸರವಾದಿ ಹಾಗೂ ಚಿಂತಕ ಸಿ. ಯತಿರಾಜು ಅವರು, ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಶಸ್ತ್ರಾಸ್ತ್ರಗಳ ಮಾರುಕಟ್ಟೆ ವಿಸ್ತರಣೆಗಾಗಿ ಮತ್ತು ಸ್ವಂತ ಲಾಭಕ್ಕಾಗಿ ಯುದ್ಧಗಳನ್ನು ಪ್ರಚೋದಿಸುತ್ತಿವೆ ಎಂದು ಆರೋಪಿಸಿದರು. "ಈ ಭೂಮಿ ಸಕಲ ಜೀವ–ಚರಗಳಿಗೆ ಸೇರಿದುದು. ಈ ಭೂಮಿಯನ್ನು ಹಾಳುಮಾಡುವ ಯುದ್ಧಗಳನ್ನು ನಿಲ್ಲಿಸಲು ಜಾಗತಿಕ ಶಾಂತಿ ಚಳುವಳಿ ಬೆಳೆದುಬರಬೇಕಾದ ಅನಿವಾರ್ಯತೆ ಇದೆ" ಎಂದು ಅವರು ಅಭಿಪ್ರಾಯಪಟ್ಟರು.

ಚಿಂತಕ ಪ್ರೊ. ಕೆ. ದೊರೈರಾಜು ಮಾತನಾಡಿ, "ಸಾಮ್ರಾಜ್ಯಶಾಹಿ ರಾಷ್ಟ್ರಗಳು ನಿಸರ್ಗದತ್ತವಾಗಿ ಸಂಪನ್ಮೂಲಗಳನ್ನು ಹೊಂದಿರುವ ದೇಶಗಳ ಮೇಲೆ ತಮ್ಮ ಹಿಡಿತ ಸಾಧಿಸಲು ಜನಾಂಗೀಯ ದ್ವೇಷವನ್ನು ಹುಟ್ಟುಹಾಕುತ್ತಾ ಅಮಾಯಕರ ಹತ್ಯೆಗೆ ಇಳಿದಿವೆ. ಇಡೀ ಮಾನವ ಕುಲವು ಇದನ್ನು ವಿರೋಧಿಸಬೇಕು" ಎಂದು ಕರೆ ನೀಡಿದರು.

ಎಐಟಿಯುಸಿ ಜಿಲ್ಲಾ ಮುಖಂಡರಾದ ಕಂಬೇಗೌಡರು ಮಾತನಾಡಿ, "ಅಮೆರಿಕಾ ಜಗತ್ತಿನ ರೌಡಿಯಂತೆ ವರ್ತಿಸುತ್ತಿದೆ. ತಾವು ಮಾಡಿದ್ದೇ ಸರಿ ಎನ್ನುವ ಅವರ ಸರ್ವಾಧಿಕಾರಿ ನಡೆಯನ್ನು ಒಪ್ಪಲು ಸಾಧ್ಯವಿಲ್ಲ" ಎಂದು ತೀವ್ರ ವಿರೋಧ ವ್ಯಕ್ತಪಡಿಸಿದರು.\

ಸಿಐಟಿಯುನ ಸೈಯದ್ ಮುಜೀಬ್ ಮಾತನಾಡಿ, "ಯುದ್ಧಗಳು ಜಗತ್ತಿನಲ್ಲಿ ಸಂಕಟಗಳ ಸರಮಾಲೆಯನ್ನು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ. ಎಲ್ಲೆಡೆ ವಿನಾಶವನ್ನೇ ಸೃಷ್ಟಿಸುವ ಯುದ್ಧಗಳು ಯಾವುದೇ ಸಮಸ್ಯೆಗೆ ಪರಿಹಾರವಲ್ಲ. ನಮ್ಮ ದೇಶದ ಸರ್ಕಾರವು ಅಲಿಪ್ತ ನೀತಿಯನ್ನು ಕಡೆಗಣಿಸಿ ಯುದ್ಧಕೋರತನಕ್ಕೆ ಬೆಂಬಲ ನೀಡಬಾರದು" ಎಂದು ಒತ್ತಾಯಿಸಿದರು.

ಸಾವಿತ್ರಿಬಾಯಿ ಪೋಲೆ ಮಹಿಳಾ ಸಂಘದ ಅನುಪಮ ಮಾತನಾಡಿ, "ಯುದ್ಧ ಎಲ್ಲೇ ನಡೆದರೂ ನಾವು ಅದಕ್ಕೆ ಬೆಲೆ ತೆರಬೇಕಾಗುತ್ತದೆ. ಯುದ್ಧವು ಎಲ್ಲರನ್ನೂ ಸಂಕಷ್ಟಕ್ಕೆ ದೂಡುತ್ತದೆ. ಹಾಗಾಗಿ ನಾವೆಲ್ಲರೂ ಯುದ್ಧವನ್ನು ವಿರೋಧಿಸಬೇಕು" ಎಂದರು.

ಈ ಸಂದರ್ಭದಲ್ಲಿ ಎಂ.ಎಸ್. ಎಸ್.ಕಲ್ಯಾಣಿ, ಮಾನವ ಹಕ್ಕು ಹೋರಾಟಗಾರ ಸೈಯದ್ ತಾಜುದ್ದೀನ್, ಜನವಾದಿ ಮಹಿಳಾ ಸಂಘಟನೆಯ ಟಿ.ಆರ್. ಕಲ್ಪನಾ, ಕಾರ್ಮಿಕ ಮುಖಂಡ ಗಿರೀಶ್, ಬಂಡಾಯ ಸಾಹಿತಿ ಅಶ್ವತ್ಥನಾಯರಾಣ ಗುಟ್ಟೆ ಮಾತನಾಡಿದರು.

ತುಮಕೂರು ಸೈನ್ಸ್ ಸೆಂಟರ್ ನ ಅಧ್ಯಕ್ಷರಾದ ಅಕ್ಕಮ್ಮ ಸಂಗಡಿಗರು 'ಒಡೆದ ಮನಸ್ಸುಗಳ ಕಂಡ ಕನಸ್ಸುಗಳ ಕಟ್ಟುವ' ಗೀತೆ ಹಾಡಿದರು. ಪುಟಾಣಿಗಳಾದ ಉಸ್ಮನ್, ವಿನುತ ಮತ್ತು ಎ. ನರಸಿಂಹಮೂರ್ತಿ ಅವರು ಕ್ಯಾಂಡಲ್ ಗಳನ್ನು ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಕ್ಯಾಂಡಲ್ ಲೈಟ್ ಪ್ರತಿಭಟನೆಯಲ್ಲಿ ಎಐಯುಟಿಯುಸಿಯ ಮಂಜುಳಾ, ಸಿಐಟಿಯುನ ರಂಗಧಾಮಯ್ಯ, ಶಿವಕುಮಾರ್ ಸ್ವಾಮಿ, ವಕೀಲರಾದ ಕೆ.ವಿ. ಸತ್ಯನಾರಾಯಣ, ತುಮಕೂರು ಸೈನ್ಸ್ ಸೆಂಟರ್ ನ ಪಿ. ಪ್ರಸಾದ್, ಪಿಂಚಣಿದಾರರ ಸಂಘದ ಟಿ.ಜಿ ಶಿವಲಿಂಗಯ್ಯ, ಸಮುದಾಯ ಸಂಘಟನೆಯ ಅಶ್ವಥಯ್ಯ,ಎಐಟಿಯುಸಿ ಚಂದ್ರಶೇಖರ್, ಅಂಗನವಾಡಿ ನೌಕರರ ಸಂಘದ ಗೌರಮ್ಮ, ಜಬೀನಾ ಖಾತೂನ್, ಕಟ್ಟಡ ಕಾರ್ಮಿಕರ ಸಂಘದ ಕಲೀಲ್, ಮುನಿಸಿಪಲ್ ಕಾರ್ಮಿಕ ಸಂಘದ ಮಾರುತಿ, ಶ್ರೀನಿವಾಸ್, ಸಾಧಿಕ್, ಡಿವೈಎಸ್‌ನ ಎಸ್. ರಾಘವೇಂದ್ರ, ಉಮರ್ ಫಾರೂಕ್ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಪರಿಶಿಷ್ಟ ಪಂಗಡಕ್ಕೆ ಶೇ. 7 ಮೀಸಲಾತಿ ನೀಡಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ



ತುಮಕೂರು– ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಶೇ. 7 ಮೀಸಲಾತಿ ನೀಡಿ ನಂತರ 56437 ಹುದ್ದೆಗಳನ್ನು ಭರ್ತಿ ಮಾಡುವಂತೆ ಹಾಗೂ ಎಸ್ಸಿ–ಎಸ್ಟಿ ಸಮುದಾಯಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಿ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಜಮಾಯಿಸಿದ ಸಮುದಾಯದ ಮುಖಂಡರು ಮೀಸಲಾತಿ ನಮ್ಮ ಹಕ್ಕು, ಭಿಕ್ಷೆಯಲ್ಲ ಎಂಬ ಘೋಷಣೆಗಳನ್ನು ಕೂಗಿ ತಮ್ಮ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ ರವರ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಒಕ್ಕೂಟದ ಮುಖಂಡರಾದ ಕುಪ್ಪೂರು ಶ್ರೀಧರ್ ಅವರು, ರಾಜ್ಯ ಸರ್ಕಾರ 2022ರಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ಶೇ. 15 ರಿಂದ ಶೇ. 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ. 3 ರಿಂದ ಶೇ. 7 ರಷ್ಟು ರಾಜ್ಯ ಸರ್ಕಾರ ಹೆಚ್ಚಿಸಿದೆ. ಆದರೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸದೆ ನಿರ್ಲಕ್ಷ್ಯ ತೋರಿದ್ದು, ಅತಿ ಶೀಘ್ರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂವಿಧಾನದ 9ನೇ ಅಧಿಸೂಚಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರಸ್ತುತ ರಾಜ್ಯ ಸರ್ಕಾರ ಸುಮಾರು 56,437 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದು ಸರಿಯಷ್ಟೆ. ಆದರೆ 2022 ರಲ್ಲಿ ಎಸ್ಸಿ ಹಾಗೂ ಎಸ್ಟಿ ಸಮುದಾಯಗಳಿಗೆ ಹೆಚ್ಚಿಸಿರುವ ಮೀಸಲಾತಿಯನ್ನು ಕೈಬಿಟ್ಟು ಹಳೆಯ ಮಾದರಿಯ ಮೀಸಲಾತಿ ಅಡಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಎಸ್ಸಿ ಹಾಗೂ ಎಸ್ಟಿ ಸಮುದಾಯಗಳು ಖಂಡಿಸುತ್ತವೆ. 2022ರ ಮೀಸಲಾತಿ ಅನ್ವಯ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ಎಸ್ಸಿ ಹಾಗೂ ಎಸ್ಟಿ ಸಮುದಾಯಗಳಿಗೆ ಶೇ. 56 ರಷ್ಟು ಮೀಸಲಾತಿ ಆಗುವವರೆಗೂ ಯಾವುದೇ ನೇಮಕಾತಿ ಮಾಡಬಾರದು ಎಂದು ಒತ್ತಾಯಿಸಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಮ್ಮ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.ಪ್ರತಿಭಟನೆಯಲ್ಲಿ ಒಕ್ಕೂಟದ ಮುಖಂಡರುಗಳಾದ ಸಿಂಗದಹಳ್ಳಿ ರಾಜಕುಮಾರ್, ನಿವೃತ್ತ ಅಬಕಾರಿ ಅಧಿಕಾರಿ ನಾಗರಾಜು, ನಿವೃತ್ತ ಬಿಇಓ ಪಿ.ಬಿ. ಬಸವರಾಜು, ರಾಮಚಂದ್ರಪ್ಪ, ಸೋಲಾರ್ ರಾಜು, ವಿದ್ಯಾರ್ಥಿ ಘಟಕದ ನವೀನ್, ಮಂಜುನಾಥ್, ಕುಂದೂರು ಮುರುಳಿ, ನಾಗರಾಜು, ಅಡವೀಶಸ್ವಾಮಿ, ಪುರುಷೋತ್ತಮ, ಶಿವಕುಮಾರ್, ಪ್ರಕಾಶ್ ಹೆಚ್., ಸರಸ್ವತಿ, ಯಶೋಧಮ್ಮ, ಯೋಗೇಂದ್ರಬಾಬು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

# ಕೃತಕ ಬುದ್ಧಿಮತ್ತೆಯ ಕಾಲದಲ್ಲಿ, ಸಹಜ ಬುದ್ಧಿಮತ್ತೆ ಹಳ್ಳ ಹಿಡಿದು ಕೊಚ್ಚೆ ಗುಂಡಿಯಲ್ಲಿ ಬಿದಿದೆ ಇಲ್ಲಿ ಯಾರು ಮೊದಲು....

ಜಾಗತೀಕರಣ, ಮುಕ್ತ ಮಾರುಕಟ್ಟೆ ಅಂತ್ಯವಾಗುವತ್ತಾ ವಿಶ್ವ. ಸಂಕುಚಿತ ನಾಯಕರ ಕೈಯಲ್ಲಿ ಬಲಿಷ್ಠ ದೇಶಗಳ ಆಡಳಿತ ವ್ಯವಸ್ಥೆ......
ಸಹಜ ಬುದ್ದಿಮತ್ತೆ ನಾಶವಾಗಿ ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ನಾವು....
ಅಮೆರಿಕ ಮೊದಲು ಡೊನಾಲ್ಡ್ ಟ್ರಂಪ್,
ಇಲ್ಲ, ಇಲ್ಲಾ ಚೀನಾ ಮೊದಲು ಷಿ ಜಿನ್ ಪಿಂಗ್,
ಇಲ್ಲ, ಇಲ್ಲಾ ರಷ್ಯಾ ಮೊದಲು ವ್ಲಾದಿಮಿರ್ ಪುಟಿನ್,
ಇಲ್ಲ, ಇಲ್ಲಾ ಭಾರತ ಮೊದಲು ನರೇಂದ್ರ ಮೋದಿ,
ಇಲ್ಲ, ಇಲ್ಲಾ ಇಸ್ರೇಲ್ ಮೊದಲು, ಬೆಂಜಮಿನ್ ನೆತನ್ಯಾಹು,
ಇಲ್ಲ, ಇಲ್ಲಾ ಪಾಕಿಸ್ತಾನ ಮೊದಲು, ಶಹಬಾಜ್ ಶರೀಫ್,
ಇಲ್ಲ, ಇಲ್ಲಾ ಇರಾನ್ ಮೊದಲು ದಿವಂಗತ ಅಯಾತುಲ್ಲಾ ಆಲಿ ಖಮೇನಿ,
ಇಲ್ಲ, ಇಲ್ಲಾ ಜರ್ಮನಿ ಮೊದಲು ಫ್ರೆಡ್ರಿಕ್ ಮರ್ಜ್,
ಇಲ್ಲ, ಇಲ್ಲಾ ಇಂಗ್ಲೆಂಡ್ ಮೊದಲು ಕೀರ್ ಸ್ಟಾರ್ಮರ್,
ಇಲ್ಲ, ಇಲ್ಲಾ ಕೆನಡಾ ಮೊದಲು ಮಾರ್ಕ್ ಕಾರ್ನಿ....
ಯಾವುದು ಮೊದಲು, ಯಾರು ಮೊದಲು, ಯಾವುದು ಆತ್ಮನಿರ್ಭರ, ಯಾವುದು ಸ್ವಾಭಿಮಾನ, ಯಾವುದು ಧರ್ಮ, ಯಾವುದು ದೇವರು......ಹುಸಿ ರಾಷ್ಟ್ರೀಯತೆ,
ವಿನಾಶದ ಅಭಿವೃದ್ಧಿ, ದಯೆ ಇಲ್ಲದ ಧರ್ಮ,
ಕಣ್ಣಿಗೆ ಕಾಣದ ದೇವರು,
ಇವುಗಳ ನಡುವೆ ನಾಯಕರಲ್ಲಿನ ರಾಕ್ಷಸತ್ವದಿಂದ ವಿಶ್ವ ನರಳುತ್ತಿದೆ.....
ಈ ಕ್ಷಣದಲ್ಲಿ ನಮ್ಮ ಕಣ್ಣ ಮುಂದೆಯೇ ವಿವಿಧ ದೇಶಗಳ ನಡುವೆ ಎಷ್ಟೊಂದು ಯುದ್ಧ ನಡೆಯುತ್ತಿದೆ, ಎಷ್ಟೊಂದು ಹಿಂಸೆ, ಎಷ್ಟೊಂದು ಜನರ ಸಾವು. ಇದು ಸಾಮೂಹಿಕ ವಿನಾಶವಾದರೆ, ಕೌಟುಂಬಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ವ್ಯಾವಹಾರಿಕವಾಗಿ, ವೈಯಕ್ತಿಕವಾಗಿ ಎಷ್ಟೊಂದು ಕೊಲೆ, ಸುಲಿಗೆ, ಅತ್ಯಾಚಾರ, ಅಪಘಾತ, ಆತ್ಮಹತ್ಯೆ ನಡೆಯುತ್ತಿದೆ.
ತಿನ್ನಲು, ಉಣ್ಣಲು, ಹಾಸಿ ಹೊದ್ದಿಕೊಳ್ಳಲು, ವಾಸಿಸಲು, ಅನುಭವಿಸಲು ಎಷ್ಟೊಂದು ಸೌಕರ್ಯಗಳು, ಸುಖಮಯ ಜೀವನಕ್ಕಾಗಿ ಎಷ್ಟೊಂದು ಆದರ್ಶ ಚಿಂತನೆಗಳು, ಸೌಕರ್ಯಗಳು.
ಎಲ್ಲವೂ ಸಿಕ್ಕ ನಂತರ ಮನುಷ್ಯನಿಗೆ ಕೊಬ್ಬು ಹೆಚ್ಚಾಗಿದೆ. ಆ ಕೊಬ್ಬಿನಿಂದಲೇ ಆತ ನಾಶವಾಗುತ್ತಿದ್ದಾನೆ.



ದೇಶಗಳ ನಡುವೆ ಉಂಟಾಗುವ ಅಥವಾ ಇನ್ಯಾವುದೇ ಭಿನ್ನಾಭಿಪ್ರಾಯ ಬಗೆಹರಿಸಲು ಸಾಧ್ಯವೇ ಇಲ್ಲದಂತ ಸಮಸ್ಯೆಗಳೇನು ಇಲ್ಲ. ಹಸಿವಿನಿಂದ ಸಾಯುತ್ತಾ, ಪ್ರಾಣಿಗಳಿಗೆ ಆಹಾರವಾಗುತ್ತಾ, ರೋಗಗಳಿಗೆ ತುತ್ತಾಗುತ್ತಾ, ಪ್ರಾಕೃತಿಕ ವಿಕೋಪಗಳಿಗೆ ಬಲಿಯಾಗುತ್ತಾ, ಯುದ್ಧಗಳಿಂದ ನಾಶವಾಗುತ್ತಾ ಬದುಕುತ್ತಿದ್ದ ಮನುಷ್ಯ, ಇಂದು ಎಲ್ಲಾ ಸುಖಭೋಗಗಳ ನಡುವೆ ಬದುಕಲೇ ಸಾಧ್ಯವಾಗುತ್ತಿಲ್ಲ ಎನ್ನುವುದಕ್ಕಿಂತ ವಿಚಿತ್ರ ಇನ್ನೊಂದಿದೆಯೇ ? ಇಂತಹ ಪರಿಸ್ಥಿತಿಯಲ್ಲಿ ಸ್ವಲ್ಪ ಕೊಟ್ಟು ಪಡೆದುಕೊಳ್ಳುವಿಕೆಯ ಮೂಲಕ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದಲ್ಲವೇ...
ಕೃತಕ ಬುದ್ಧಿಮತ್ತೆಯ ಕಾಲದಲ್ಲಿ, ಸಹಜ ಬುದ್ಧಿಮತ್ತೆ ಹಳ್ಳ ಹಿಡಿದು ಕೊಚ್ಚೆ ಗುಂಡಿಯಲ್ಲಿ ಬಿದ್ದು ಒದ್ದಾಡುತ್ತಾ, ತನ್ನನ್ನೇ ತಾನು ನಾಶ ಪಡಿಸಿಕೊಳ್ಳುವ ಹಂತಕ್ಕೆ ಹೋಗುತ್ತಿರುವುದು ನಿಜಕ್ಕೂ ಯುಗಾಂತ್ಯಾದ ಸಂಭವನೀಯತೆಯನ್ನು ಹೆಚ್ಚಿಸುತ್ತಿದೆ.
ಹೀಗೆ ಹೊಡೆದಾಡಿ ಸಾಯುವುದೇ ಸಹಜವಾದಲ್ಲಿ ನಮಗೆ ಈ ತಂತ್ರಜ್ಞಾನಗಳೇ ಬೇಡ, ಈ ಆಡಳಿತ ವ್ಯವಸ್ಥೆಯೇ ಬೇಡ. ಎಂದಿನಂತೆ ಕಾಡಿಗೆ ಹೋಗಿ, ಹೇಗೋ ಪ್ರಾಣಿಗಳೊಂದಿಗೆ ಸಂಘರ್ಷ ಮಾಡುತ್ತಾ, ಎಲ್ಲೋ ಬಿಲದೊಳಗೆ, ಮರದ ಪೊಟರೆ ಒಳಗೆ, ಗುಹೆಗಳಲ್ಲಿ, ಕಲ್ಲು ಬಂಡೆಗಳ ಸೊಂದಿನಲ್ಲಿ, ಹಣ್ಣು ಹಂಪಲು ತಿನ್ನುತ್ತಾ ಬದುಕುವುದೇ ಉತ್ತಮ ಅನಿಸುತ್ತದೆ.

ಏಕೆಂದರೆ ಎಲ್ಲೋ ಮಧ್ಯಪ್ರಾಚ್ಯದ ದೇಶಗಳಲ್ಲಿ, ಇನ್ನೆಲ್ಲೋ ಪಾಕಿಸ್ತಾನ – ಅಫ್ಘಾನಿಸ್ತಾನದ ಗಡಿಗಳಲ್ಲಿ, ಮತ್ತೆಲ್ಲೂ ಆಫ್ರಿಕಾದ ಆ ಗಲಭೆ ಪೀಡಿತ ದೇಶದಲ್ಲಿ, ಬದುಕಿ, ನರಳುತ್ತಾ, ಯಾರದೋ ಬಾಂಬು ಬಂದೂಕುಗಳಿಗೆ ಸಿಕ್ಕಿ ಸಾಯುವುದಕ್ಕಿಂತ ಕಾಡಿನಲ್ಲಿ ವಾಸಿಸುವುದೇ ಉತ್ತಮವಲ್ಲವೇ....
ಇಲ್ಲಿ ಈ ದೇಶಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುವುದೇ ಕಷ್ಟವಾಗಿರುವಾಗ, ಈ ಅಣುಬಾಂಬುಗಳ ಸುತ್ತ, ಈ ಆತ್ಮಹತ್ಯಾ ಬಾಂಬುಗಳ ಸುತ್ತ, ಈ ನರ ರಾಕ್ಷಸರ ಸುತ್ತ, ಈ ತೆರಿಗೆ ಭಯೋತ್ಪಾದಕರ ಸುತ್ತ ಬದುಕುವುದಕ್ಕಿಂತ ಕಾಡೇ ಎಷ್ಟೋ ಉತ್ತಮ ಎನಿಸುತ್ತದೆ.
ಜನಗಳಿಗೆ ನಾವೇ ಮೊದಲು, ನಮ್ಮದೇ ಮೊದಲು ಎನ್ನುವ ಭ್ರಮೆ ಸೃಷ್ಟಿಸಿ, ಆ ಕಡೆ ವಿಶ್ವಗುರುವಾಗಲು, ವಿಶ್ವವನ್ನು ನಿಯಂತ್ರಣಕ್ಕೆ ಪಡೆಯಲು ಪ್ರಯತ್ನಿಸುವ ದೇಶಗಳ ಮುಖ್ಯಸ್ಥರ ಮುಖವಾಡಗಳು ಕಳಚಿ ಬೀಳುತ್ತಿದೆ. ಇಡೀ ವಿಶ್ವದ ಮಾನವ ಸಮುದಾಯ ಒಂದೇ ಎಂದು ಭಾವಿಸಿ ಬದುಕುವ ವಾತಾವರಣ ನಿರ್ಮಾಣವಾಗದೆ, ವ್ಯಾವಹಾರಿಕ ದೃಷ್ಟಿಯಿಂದ ದೇಶಗಳಾಗಿ, ಧರ್ಮಗಳಾಗಿ, ಭಾಷೆಗಳಾಗಿ ವಿಭಜನೆ ಹೊಂದಿ, ಈಗ ಅದರ ಆಧಾರದ ಮೇಲೆಯೇ ಒಬ್ಬರಿಗೊಬ್ಬರು ಕೊಂದುಕೊಳ್ಳುತ್ತಿರುವುದು, ಅದನ್ನು ನೋಡುತ್ತಾ ಅನುಭವಿಸುವುದು ತುಂಬಾ ಕಷ್ಟ. ಅದಕ್ಕಿಂತ ಅರಣ್ಯ ವಾಸವೇ ಉತ್ತಮ.
ಯಾರೋ ಹಾಕಿದ ಬಾಂಬಿಗೆ ಇನ್ಯಾರೋ ಸಾಯುತ್ತಾ, ಮತ್ಯಾರೋ ನರಳುತ್ತಾ, ಅಣುಬಾಂಬ್ ಯಾವಾಗ ಸ್ಪೋಟಿಸುತ್ತದೆ ಎಂಬ ಆತಂಕದಲ್ಲಿ ಬದುಕುವ ಈ ಜೀವನ ಬೇಕೆ. ಯಾರದೋ ತೆವಲಿಗೆ, ಮತ್ಯಾರೋ ಬಲಿಯಾಗುವ ಈ ಸಮಾಜ ಯಥಾಸ್ಥಿತಿಯಲ್ಲಿ ಮುಂದುವರಿಯ ಬೇಕೆ. ನಾವುಗಳೇನು ಈ ರಾಜಕೀಯ ನಾಯಕರಾ ಹುಚ್ಚಿಗೆ ಬಲಿಯಾಗುವ ಬಿಟ್ಟಿ ಜೀವಗಳೇ....



ಯುದ್ಧಗಳ ವರ್ಣನೆಯನ್ನು ಮಾಧ್ಯಮಗಳಲ್ಲಿ ಕೇಳಿ ಕೇಳಿ ಸಾಕಾಗಿದೆ. ಅವರ ಆ ಭಾಷೆ, ಅವರ ಆ ವರ್ಣನೆ, ಅವರ ಒಳಗಿನ ಕ್ರೌರ್ಯ, ಅವರ ಅಸೂಕ್ಷ್ಮತೆ ಎಲ್ಲವೂ ರಾಜಕಾರಣಿಗಳನ್ನು ಮೀರಿಸುವಂತಿದೆ. ಒಟ್ಟಿನಲ್ಲಿ ಮನುಷ್ಯನ ಈ ಕಾಲಘಟ್ಟದ ಯುಗಾಂತ್ಯ ಹತ್ತಿರವಾಗುತ್ತಿದೆ. ಸಹಜ ಬುದ್ಧಿ ಮತ್ತೆ ನಾಶವಾಗಿ ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ನಾವು...
ಮುಕ್ತ ಮಾರುಕಟ್ಟೆ, ಜಾಗತೀಕರಣ, ವಿಶ್ವವೇ ಒಂದು ಕುಟುಂಬ ಎನ್ನುವ ಪರಿಕಲ್ಪನೆ ನಾಶವಾಗಿ ಮತ್ತೆ ನಮ್ಮ ನಮ್ಮ ದೇಶವೇ ಶ್ರೇಷ್ಠ, ನಮ್ಮ ನಮ್ಮ ಧರ್ಮವೇ ಶ್ರೇಷ್ಠ, ನಮ್ಮ ದೇವರೇ ಶ್ರೇಷ್ಠ ಎಂಬ ಸಂಕುಚಿತ ಕಾಲಘಟ್ಟಕ್ಕೆ ಮರಳುತ್ತಿದ್ದೇವೆ. ಹೇಳುವುದು ಮಾತ್ರ ಕೃತಕ ಬುದ್ಧಿಮತ್ತೆ ಎಂಬ ಅತ್ಯಾಧುನಿಕ ತಂತ್ರಜ್ಞಾನ ಅಭಿವೃದ್ಧಿ ಹೊಂದಿದೆ ಎಂದು, ಆದರೆ ಸಾಗುತ್ತಿರುವುದು ಮಾತ್ರ ಅತ್ಯಂತ ಅಜ್ಞಾನದ ಸಮಾಜದತ್ತ, ಎಷ್ಟೊಂದು ವಿಚಿತ್ರವಲ್ಲವೇ.....

ವಿವೇಕಾನಂದ. ಎಚ್. ಕೆ.
**9663750451.......9844013068.......**

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಬೇವು ಬಿತ್ತಿ ಮಾವಿನ ನಿರೀಕ್ಷೆಯಲ್ಲಿ ನಾವು, ನೀವು ಎಲ್ಲಾ ಕಡೆ ಸ್ವಾರ್ಥ, ದುರಾಸೆ, ದ್ವೇಷ, ಅಸೂಯೆ, ನಿರ್ಲಕ್ಷ್ಯ

ಇತ್ತೀಚೆಗೆ ಬೆಂಗಳೂರಿನ ರಸ್ತೆಯಲ್ಲಿ ಪತ್ನಿಯೊಂದಿಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬರಿಗೆ ಹೃದಯಾಘಾತವಾಗಿ ರಸ್ತೆಯಲ್ಲಿ ಬಿದ್ದು ನೋವಿನಿಂದ ಸಾವು ಬದುಕಿನ ನಡುವೆ ನರಳಾಡುತ್ತಿರುವಾಗ, ಅಲ್ಲಿನ ದಾರಿಹೋಕರು ಯಾರೂ ಅವರ ನೆರವಿಗೆ ಬರಲಿಲ್ಲ. ಆತನ ಪತ್ನಿ ಪರಿಪರಿಯಾಗಿ ಕೇಳಿಕೊಂಡರೂ ಜನರು ಸಹಾಯ ಮಾಡಲಿಲ್ಲ, ಇದೊಂದು ಅಮಾನವೀಯ ಘಟನೆ, ಸಮಾಜ ಇದಕ್ಕೆ ಸ್ಪಂದಿಸದೆ ತೀರಾ ಕ್ರೌರ್ಯದಿಂದ ವರ್ತಿಸಿದೆ ಎಂಬ ರೀತಿಯ ಮಾಧ್ಯಮಗಳ ವರದಿಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಇದು ಮೇಲ್ನೋಟಕ್ಕೆ ಹೌದು ಎನಿಸಿದರು ಆಳದಲ್ಲಿ ಈ ಸಮಾಜ ಈ ರೀತಿಯ ಮನಸ್ಥಿತಿಯನ್ನು ಸೃಷ್ಟಿಸಿರುವುದು ಸೂಕ್ಷ್ಮವಾಗಿ ಗಮನಿಸಿದಾಗ ಅರಿವಿಗೆ ಬರುತ್ತದೆ......
ಬೇವು ಬಿತ್ತಿ ಮಾವು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗೆಯೇ ಸಮಾಜದಲ್ಲಿ ಸತ್ವಯುತ, ಆರೋಗ್ಯಯುತ ಮೌಲ್ಯಗಳನ್ನು ಉಳಿಸದೆ, ಬೆಳೆಸದೆ ಯಾವುದೋ ಒಂದು ಘಟನೆಯ ಹಿನ್ನೆಲೆಯಲ್ಲಿ ಈ ಸಮಾಜವನ್ನು ವಿಮರ್ಶಿಸಿದರೆ ಅದು ಆತ್ಮವಂಚನೆಯಾಗುತ್ತದೆ. ಇಂದು ಯಾವುದಾದರೂ ಕ್ಷೇತ್ರ ತನ್ನ ಮೌಲ್ಯವನ್ನು ಉಳಿಸಿಕೊಂಡಿದೆಯೇ ಎಂಬುದನ್ನು ಯೋಚಿಸಿ ನೋಡಿ. ಸ್ಪರ್ಧೆ, ವೇಗ, ಹಣ, ಅಧಿಕಾರದ ಹಿಂದೆ ಬಿದ್ದ



## ಬೇವು ಬಿತ್ತಿ ಮಾವು ಬೆಳೆವ ತವಕ ಬೇಡ ಮಾನವ

ಸಮಾಜದ ಜನರ ಮನಸ್ಥಿತಿಯಲ್ಲಿ ಸಹಾಯ, ಸೇವೆ, ತ್ಯಾಗ, ಕರುಣೆ ಮುಂತಾದ ಮಾನವೀಯ ಮೌಲ್ಯಗಳು ಹೇಗೆ ತಾನೇ ಚಟುವಟಿಕೆಯಿಂದಿರಲು ಸಾಧ್ಯ. ಎಲ್ಲಾ ಕಡೆ ಸ್ವಾರ್ಥ, ದುರಾಸೆ, ದ್ವೇಷ, ಅಸೂಯೆ, ನಿರ್ಲಕ್ಷ್ಯ, ಉಡಾಫೆ ಇವುಗಳೇ ಮೇಲುಗೈ ಪಡೆದಿರುವಾಗ ಈ ರೀತಿಯ ಘಟನೆಗಳು ಸಾಮಾನ್ಯವಾಗುತ್ತಾ ಸಾಗುತ್ತದೆ. ಎಷ್ಟೋ ಕಡೆ ಅಪಘಾತವಾದಾಗ ಕೆಲವರು ಸಾಮೂಹಿಕವಾಗಿ ದರೋಡೆ ಮಾಡುವುದನ್ನು ಸಹ ಗಮನಿಸಿದ್ದೇವೆ. ಇದು ಮಾಡಿದ್ದುಣ್ಣೋ ಮಹಾರಾಯ ಎಂಬ ನಾಣ್ನುಡಿಯ ವಾಸ್ತವದ ಪ್ರತಿರೂಪ ಎನಿಸುತ್ತದೆ.....
ಸೆಲ್ಫೀಗಳ ( ಫೋಟೋಗಳ ) ನಡುವೆ ಮಾಯವಾಗುತ್ತಿರುವ ಮಾನವೀಯತೆ......
ಅಪಘಾತಗಳ ಸಂದರ್ಭಗಳಲ್ಲಿ, ಕಷ್ಟದ ಸನ್ನಿವೇಶದಲ್ಲಿ ಜನ ಗಾಯಾಳುಗಳಿಗೆ ನೆರವಾಗದೆ ಅಮಾನವೀಯವಾಗಿ ವರ್ತಿಸುವುದು ಆ ಕ್ಷಣದ ಅಲ್ಲಿದ್ದ ಜನರ ಪ್ರತಿಕ್ರಿಯೆ ಮಾತ್ರ ಎಂದು ಭಾವಿಸದಿರಿ. ಆ ಮನಸ್ಥಿತಿಯ ಹಿಂದೆ ವ್ಯವಸ್ಥೆಯ ಕ್ರೌರ್ಯ – ಮೌಲ್ಯಗಳ ಕುಸಿತ ತನ್ನ ಪ್ರಭಾವ ಬೀರಿದೆ......
ಈ ವಿಷಯದಲ್ಲಿ ಸುಪ್ರೀಂಕೋರ್ಟಿನ ಆದೇಶ ಜನರಿಗೆ ಅನುಕೂಲವಾಗುವಂತಿದ್ದರೂ ನಮ್ಮ ಪೋಲೀಸರ ವರ್ತನೆ ಇದಕ್ಕೆ ಪೂರಕವಾಗಿಲ್ಲ. ಅವರ ಭಾಷೆ ಮತ್ತು ನಡವಳಿಕೆ ಸಾಮಾನ್ಯರ ಬಗ್ಗೆ ಅಸಹನೀಯವಾಗಿಯೇ ಇದೆ.....
ಬ್ಯಾಂಕುಗಳಲ್ಲಿ ಮಾಸಿದ ಹಳೆಯ, ಹರಿದ ಬಟ್ಟೆಯ ಅಥವಾ ಪಂಚೆ ಟವಲ್ ಹಾಕಿದ ಅಮಾಯಕ ಜನರ ಮುಗ್ಧ ಮತ್ತು ತಿಳಿವಳಿಕೆ ಕೊರತೆಯ ಪ್ರಶ್ನೆಗಳಿಗೆ ಅಲ್ಲಿನ ಬಹುತೇಕ ಅಧಿಕಾರಿಗಳು ಉತ್ತರಿಸುವ ರೀತಿ ದುರಹಂಕಾರವಾಗಿ, ಅವಮಾನಕರವಾಗಿಯೇ ಇರುತ್ತದೆ......
ಆಸ್ಪತ್ರೆಗಳಲ್ಲಿ ಬಡವರಿಗೆ ನೀಡುವ ಚಿಕಿತ್ಸೆಗಳ ಗುಣಮಟ್ಟದಲ್ಲಿ ಕಣ್ಣಿಗೆ ಕಾಣುವಷ್ಟು ನಿರ್ಲಕ್ಷ್ಯ – ಪಕ್ಷಪಾತವಿರುತ್ತದೆ.....
ಮಾಧ್ಯಮಗಳಲ್ಲಿ ದುಷ್ಟತನಕ್ಕೆ ನೀಡುವ ಪ್ರಾಮುಖ್ಯತೆ ಒಳ್ಳೆಯ – ಅತ್ಯುತ್ತಮ ಸಾಧಕರ ಪ್ರಚಾರಕ್ಕೆ ನೀಡುವುದಿಲ್ಲ. ಕಪಟ ಪ್ರದರ್ಶಕ ಮನೋಭಾವನೆಗೇ ಹೆಚ್ಚಿನ ಆಧ್ಯತೆ ನೀಡುತ್ತಾರೆ.....
ಸರ್ಕಾರದ ಯಾವುದೇ ಇಲಾಖೆಯಲ್ಲಿ ಲಂಚವಿಲ್ಲದೆ – ನಿಮ್ಮನ್ನು ಸತಾಯಿಸದೆ ಕೆಲಸವಾಗಿದೆ ಎಂದರೆ ನೀವು ಅದೃಷ್ಟವಂತರೆಂದೇ ಭಾವಿಸಿ
ಅಥವಾ ನೀವು ಪ್ರಭಾವಿಗಳೋ, ರಾಜಕಾರಣಿಗಳ ಸಂಬಂಧಿಗಳೋ, ರೌಡಿಯೋ ಆಗಿರಬೇಕು.
ಇಲ್ಲದಿದ್ದರೆ ನಿಮ್ಮ ಸಂಕಷ್ಟಗಳಿಗೆ ಕೊನೆಯೇ ಇಲ್ಲ.....
ಇದು ಕೇವಲ ಉದಾಹರಣೆಗಳಷ್ಟೆ.
ಇಡೀ ವ್ಯವಸ್ಥೆ ಹೀಗೆಯೇ ನಡೆಯುತ್ತದೆ.
ಒಂದು ವೇಳೆ ನೀವು ಶ್ರೀಮಂತರೋ, ಬಲಶಾಲಿಗಳೋ, ಅತಿ ಧೈರ್ಯವಂತರೋ ಆಗಿದ್ದರೆ ವ್ಯವಸ್ಥೆ ಅಷ್ಟೊಂದು ಕಠೋರವಾಗಿ ವರ್ತಿಸುವುದಿಲ್ಲ. ಅಷ್ಟಕ್ಕೇ ಎಲ್ಲಾ ಸರಿಯಿದೆ ಎಂದು ಭಾವಿಸದಿರಿ......
ಜನಸಂಖ್ಯೆಯ ಅತಿಯಾದ ಒತ್ತಡ, ಮೌಲ್ಯಗಳ ಕುಸಿತ, ವೇಗದ ಮತ್ತು ದುರಾಸೆಯ ಜೀವನಶೈಲಿ, ಬೇಗನೆ ನಿರಾಸೆಗೊಳ್ಳುವ ಮನಸ್ಥಿತಿ, ಅದರಿಂದಾಗಿಯೇ ಉಂಟಾದ ಉದಾಸೀನತೆ ಜನರನ್ನು ಒತ್ತಡದಲ್ಲಿಟ್ಟಿದೆ......
ಆದ್ದರಿಂದಲೇ ಅಪಘಾತಗಳಂತ ಸಂದರ್ಭಗಳಲ್ಲಿ ಜನರಿಗೆ ಸಹಾಯಕ್ಕಿಂತ ಸೆಲ್ಫಿಯೇ ಮುಖ್ಯವಾಗುತ್ತದೆ.....
ಅದರೆ,ಕೆಲವು ಅಪರೂಪದ ಸಂದರ್ಭಗಳಲ್ಲಿ ಅಪಘಾತದ ಭೀಕರತೆ ಬಹುಶಃ ಅಲ್ಲಿದ್ದ ಜನರು ರಕ್ತ ಮತ್ತು ದೇಹದ ಭಾಗಗಳ ಚೆಲ್ಲಾಪಿಲ್ಲಿಯಿಂದ, ಭಯ ಆತಂಕದಿಂದ ಮನಸ್ಸಿದ್ದರೂ ಸಹಾಯಕ್ಕೆ ಬರದಿರುವ ಸಾಧ್ಯತೆಯೂ ಇರುತ್ತದೆ......
ನಮ್ಮ ಆತ್ಮೀಯರು ಅಲ್ಲಿದ್ದರೆ ಅವರಿಗೆ ಸಹಾಯ ಖಂಡಿತ ಸಿಗುತ್ತದೆ. ಅಪರಿಚಿತರ ಬಗ್ಗೆ ಮಾತ್ರ ಈ ಧೋರಣೆಯಿದೆ. ಏಕೆಂದರೆ ಟಿವಿಯಲ್ಲಿ ಆ ದೃಶ್ಯ ನೋಡುವಾಗಲೇ ಮೈ ನಡುಗುತ್ತದೆ. ಇನ್ನು ಆರು ಸ್ಥಳದಲ್ಲಿಯೇ ಇದ್ದರೆ ತಲೆತಿರುಗಿ ಬಿದ್ದರೂ ಆಶ್ಚರ್ಯವಿಲ್ಲ. ಇಲ್ಲಿ ಕುಳಿತುಕೊಂಡು ಹೇಳುವಷ್ಟು ಸುಲಭ ಸ್ಥಿತಿ ಈ ವಿಷಯದಲ್ಲಿ ಕಷ್ಟ......
ಆದ್ದರಿಂದ ಕೇವಲ ಇದೊಂದೆ ವಿಷಯದಲ್ಲಿ ಸುಧಾರಣೆ ಸಾಧ್ಯವಿಲ್ಲ. ಇಡೀ ವ್ಯವಸ್ಥೆಯ ಮಾನಸಿಕ – ನೈತಿಕ ಗಟ್ಟಿತನವನ್ನು ಪುನರ್ ರೂಪಿಸಬೇಕಾದ ಅವಶ್ಯಕತೆ ಇದೆ......
ಮಾನವೀಯ ಮೌಲ್ಯಗಳ ಪುನರ್ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗೋಣ ಎಂದು ಆಶಿಸುತ್ತಾ ................
ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ, ವಿವೇಕಾನಂದ. ಎಚ್.ಕೆ.
**9663750451.... 9844013068.......**




ತುಮಕೂರಿನ ಗಾಂಧಿನಗರದ ಮಾನಸ ವಿಶೇಷ ಮಕ್ಕಳ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್.ಬಿ.ಐ.ನ ಡಿ.ಜಿ.ಎಂ. ಅಲೋಕ್ ಚಂದ್ರ, ಎ.ಜಿ.ಎಂ.ಗಳಾದ ಟಿ.ಕೆ. ಸುರೇಂದ್ರ,ದೊರೆರಾಜು ಮತ್ತು ಇತರೆ ಅಧಿಕಾರಿಗಳು ಆಗಮಿಸಿ ಬ್ಯಾಂಕಿನಿಂದ **1,19,000** ರೂ. ಗಳ ಚೆಕ್ ನ್ನು ವಿತರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಜಿ.ಸಿ. ವಿರೂಪಾಕ್ಷ, ಉಪಾಧ್ಯಕ್ಷರಾದ ಡಿ. ಎಸ್. ನಿರ್ಮಲ, ಕಾರ್ಯದರ್ಶಿ ಡಿ.ಆರ್. ಶಿವಕುಮಾರ್, ಜಂಟಿ ಕಾರ್ಯದರ್ಶಿ ಎನ್. ಬಸವರಾಜು, ನಿರ್ದೇಶಕರಾದ ವಿಜಯಲಕ್ಷ್ಮಿ, ಶಾಲೆಯ ಮುಖ್ಯೋಪಾಧ್ಯಾಯರಾದ ಜ್ಯೋತಿ, ಬ್ಯಾಂಕಿನ ಮಾಜಿ ನಿರ್ದೇಶಕರಾದ ಕೊಪ್ಪಳ್ ನಾಗರಾಜು ಹಾಗೂ ಶಿಕ್ಷಕರು ಹಾಜರಿದ್ದರು.

# ಕೆರೆ ಕಟ್ಟೆ ಗಳಿಂದ ಮಣ್ಣು ತೆಗೆಯುವ ಮಣ್ಣು ಕಳ್ಳರು ಈ ನಿಮಯಗಳನ್ನ ಪಾಲಿಸಬೇಕು

ಕೆರೆ–ಕಟ್ಟೆಗಳ ಮಣ್ಣನ್ನು ಟ್ರಾಕ್ಟರ್ ಮಾಲೀಕರು ತೆಗೆಯಲು ಸರ್ಕಾರದಿಂದ ಅನುಮತಿ ಪಡೆಯಲು ಕೆಲವು ಕಾರಣಗಳಿವೆ:
– ಕೆರೆಗಳ ಸಂರಕ್ಷಣೆ: ಕೆರೆಗಳ ನೀರು ಸಂಗ್ರಹಣೆ ಸಾಮರ್ಥ್ಯವನ್ನು ಕಾಪಾಡಲು ಮತ್ತು ಅಕ್ರಮ ಗಣಿಗಾರಿಕೆಯನ್ನು ತಡೆಯಲು ಅನುಮತಿ ಅಗತ್ಯ.
– ಪರಿಸರ ಸಂರಕ್ಷಣೆ: ಮಣ್ಣು ತೆಗೆಯುವಾಗ ಕೆರೆಯ ಮೂಲ ವಿನ್ಯಾಸಕ್ಕೆ ಧಕ್ಕೆ ತರದಂತೆ ನೋಡಿಕೊಳ್ಳಲು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಬೇಕು.
– ಕೃಷಿ ಉದ್ದೇಶಗಳಿಗೆ ಸೀಮಿತ ಬಳಕೆ: ರೈತರು ತಮ್ಮ ಜಮೀನಿನ ಫಲವತ್ತತೆಯನ್ನು ಹೆಚ್ಚಿಸಲು ಮಣ್ಣನ್ನು ಬಳಸಬಹುದು, ಆದರೆ ವಾಣಿಜ್ಯ ಉದ್ದೇಶಗಳಿಗೆ ಅನುಮತಿ ಬೇಕು.
– ನಿಯಮಿತ ಮೇಲ್ವಿಚಾರಣೆ: ಅನುಮತಿಯ ಮೂಲಕ ಸರ್ಕಾರವು ಮಣ್ಣು ತೆಗೆಯುವ ಪ್ರಮಾಣ, ವಿಧಾನ ಮತ್ತು ಸ್ಥಳವನ್ನು ನಿಯಂತ್ರಿಸಬಹುದು.
"ಮಣ್ಣು ವೈಜ್ಞಾನಿಕವಾಗಿ ತೆಗೆಯಬೇಕು" ಎಂದರೆ:
– ಒಂದು ಮೀಟರ್‌ಗಿಂತ ಹೆಚ್ಚು ಆಳಕ್ಕೆ ಗುಂಡಿ ತೋಡಬಾರದು.
– ಕೆರೆಯ ಒಳಭಾಗದ ರಚನೆಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು.





– ಟ್ರಾಕ್ಟರ್‌ಗಳನ್ನು ಮಾತ್ರ ಬಳಸಬೇಕು, ಟ್ರಕ್‌ಗಳು ಅಥವಾ ಲಾರಿಗಳಲ್ಲ.
– ಮಣ್ಣಿನಲ್ಲಿ ಯಾವುದೇ ಖನಿಜಾಂಶಗಳ ಪರೀಕ್ಷೆ ಕೃಷಿ ಉದ್ದೇಶಕ್ಕೆ ಅನಗತ್ಯ.
ಹೋರಾಟಗಾರರು ಅನುಮತಿ ಇಲ್ಲದೆ ಮಣ್ಣು ವಿಲೇವಾರಿ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಇಲಾಖೆಗೆ ದೂರು ನೀಡುವುದು ಏಕೆಂದರೆ:
– ಅಕ್ರಮ ಗಣಿಗಾರಿಕೆ ತಡೆಯಲು: ಕೆರೆಗಳ ಸಂರಕ್ಷಣೆ ಮತ್ತು ಪರಿಸರ ಹಾನಿಯನ್ನು ತಪ್ಪಿಸಲು.
– ನಿಯಮಗಳನ್ನು ಪಾಲಿಸಲು: ಸರ್ಕಾರದ ನೀರು ಸಂಗ್ರಹಣೆ ಮತ್ತು ಪರಿಸರ ಸಂರಕ್ಷಣಾ ನೀತಿಗಳನ್ನು ಜಾರಿಗೊಳಿಸಲು.
– ಸಮುದಾಯದ ಹಕ್ಕುಗಳನ್ನು ರಕ್ಷಿಸಲು: ಕೆರೆಗಳ ಸುತ್ತಮುತ್ತಲಿನ ಜನರಿಗೆ ನೀರು ಮತ್ತು ಜೀವನಾಧಾರವನ್ನು ಕಾಪಾಡಲು .

ಕೆರೆ–ಕಟ್ಟೆಗಳ ಮಣ್ಣನ್ನು ಟ್ರಾಕ್ಟರ್ ಮಾಲೀಕರು ತೆಗೆಯಲು ಸರ್ಕಾರದಿಂದ ಅನುಮತಿ ಪಡೆಯಲು ಕೆಲವು ಕಾರಣಗಳಿವೆ:
– ಕೆರೆಗಳ ಸಂರಕ್ಷಣೆ
– ಪರಿಸರ ಸಂರಕ್ಷಣೆ
– ಕೃಷಿ ಉದ್ದೇಶಗಳಿಗೆ ಸೀಮಿತ ಬಳಕೆ
– ನಿಯಮಿತ ಮೇಲ್ವಿಚಾರಣೆ
"ಮಣ್ಣು ವೈಜ್ಞಾನಿಕವಾಗಿ ತೆಗೆಯಬೇಕು" ಎಂದರೆ:
– ಒಂದು ಮೀಟರ್‌ಗಿಂತ ಹೆಚ್ಚು ಆಳಕ್ಕೆ ಗುಂಡಿ ತೋಡಬಾರದು
– ಕೆರೆಯ ಒಳಭಾಗದ ರಚನೆಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು
– ಟ್ರಾಕ್ಟರ್‌ಗಳನ್ನು ಮಾತ್ರ ಬಳಸಬೇಕು, ಟ್ರಕ್‌ಗಳು ಅಥವಾ ಲಾರಿಗಳಲ್ಲ
– ಮಣ್ಣಿನಲ್ಲಿ ಯಾವುದೇ ಖನಿಜಾಂಶಗಳ ಪರೀಕ್ಷೆ ಕೃಷಿ ಉದ್ದೇಶಕ್ಕೆ ಅನಗತ್ಯ
ಹೋರಾಟಗಾರರು ಅನುಮತಿ ಇಲ್ಲದೆ ಮಣ್ಣು ವಿಲೇವಾರಿ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಇಲಾಖೆಗೆ ದೂರು ನೀಡುವುದು ಏಕೆಂದರೆ:
– ಅಕ್ರಮ ಗಣಿಗಾರಿಕೆ ತಡೆಯಲು
– ನಿಯಮಗಳನ್ನು ಪಾಲಿಸಲು
– ಸಮುದಾಯದ ಹಕ್ಕುಗಳನ್ನು ರಕ್ಷಿಸಲು
ಹೌದು, ಕೆರೆ–ಕಟ್ಟೆಗಳ ಮಣ್ಣನ್ನು ತೆಗೆದರೆ ಸರ್ಕಾರಕ್ಕೆ ತೆರಿಗೆ ಕಟ್ಟಬೇಕಾಗುತ್ತದೆ. ಮಣ್ಣು ತೆಗೆಯಲು ಅನುಮತಿ ಪಡೆಯುವಾಗ ನಿಗದಿತ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಶುಲ್ಕವು ಮಣ್ಣಿನ ಪ್ರಮಾಣ ಮತ್ತು ಬಳಕೆಯ ಉದ್ದೇಶವನ್ನು ಆಧರಿಸಿರುತ್ತದೆ.
ಉದಾಹರಣೆಗೆ, ಕೃಷಿ ಉದ್ದೇಶಗಳಿಗೆ ಮಣ್ಣು ತೆಗೆಯಲು ಶುಲ್ಕ ಕಡಿಮೆಯಾಗಿರಬಹುದು, ಆದರೆ ವಾಣಿಜ್ಯ ಉದ್ದೇಶಗಳಿಗೆ ಶುಲ್ಕ ಹೆಚ್ಚಾಗಿರುತ್ತದೆ.
ನೀವು ಮಣ್ಣು ತೆಗೆಯಲು ಅನುಮತಿ ಪಡೆಯಲು ಬಯಸಿದವರು ಸಂಬಂಧಪಟ್ಟ ಸರ್ಕಾರಿ ಇಲಾಖೆಯನ್ನು ಸಂಪರ್ಕಿಸಿ ಮತ್ತು ಅಗತ್ಯವಿರುವ ಶುಲ್ಕವನ್ನು ಪಾವತಿಸಿ.

# ರಾಮನಗರ ಸುದ್ದಿ ಕಾರ್ನರ್

## ಮಹಿಳೆಯರ ಹಕ್ಕು ಕಸಿಯುತ್ತಿರುವುದು ದುರದೃಷ್ಟಕರ




ರಾಮನಗರ: ಮಹಿಳೆ ಶ್ರೇಷ್ಠ ಎಂದು ಹೇಳುತ್ತಲೇ ಅವರಿಗೆ ಇರುವ ಹಕ್ಕುಗಳನ್ನು ಕಸಿಯುವ ಕೆಲಸ ಸಮಾಜದಲ್ಲಿ ಇನ್ನು ಮುಂದುವರೆದಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಸಮಾಧಾನ ವ್ಯಕ್ತಪಡಿಸಿದರು.

ನಗರಸಭೆಯ ಸಭಾಂಗಣದಲ್ಲಿ ಪೌರ ನೌಕರರ ಸಂಘ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಪುರಾಣ, ಇತಿಹಾಸಗಳಲ್ಲಿ ಮಹಿಳೆಯರಿಗೆ ಅಗ್ರಸ್ಥಾನ, ಶ್ರೇಷ್ಠ ಗೌರವ ಕೊಡಲಾಗಿದೆ. ಆದರೆ ಪುರುಷ ಪ್ರಧಾನ ಸಮಾಜ ಮಹಿಳೆಯರಿಗೆ ಅನೇಕ ಕಟ್ಟಳೆಗಳನ್ನು ಹೇರಿದೆ. ಅವರ ವಿರುದ್ಧ ದೌರ್ಜನ್ಯ, ಶೋಷಣೆ ನಿಂತಿಲ್ಲ ಎಂದರು.

ಪೌರಾಯುಕ್ತ ಡಾ.ಜಯಣ್ಣ ಮಾತನಾಡಿ ಸತತ ಪ್ರಯತ್ನದಿಂದ ಸಾಧನೆ ಪ್ರಾಪ್ತವಾಗುತ್ತದೆ. ನಮ್ಮ ನಡುವಿನ ಸಾಧಕರಿದ್ದಾರೆ. ಅವರಿಂದ ಮಹಿಳೆಯರು ಸೇರಿದಂತೆ ಎಲ್ಲರು ಪ್ರೇರಿತರಾಗಿ ಸಾಧನೆಯ ಕಡೆ ಸಾಗಬಹುದು. ಸಾಧನೆಗೆ ಇಂದು ಅನೇಕ ಅವಕಾಶಗಳಿವೆ. ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಮಹಿಳೆಯರು ಇಂದು ಅನೇಕ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವೃತ್ತಿ ಮತ್ತು ಕುಟುಂಬದ ನಡುವೆ ಮಹಿಳೆಯರು ಸಮಯವನ್ನು ವಿಂಗಡಿಸಿಕೊಳ್ಳುವ ಜಾಣ್ಮೆ ತೋರಿಬೇಕಿದೆ ಎಂದರು.

ಸಂಸಾರ ಮತ್ತು ನೌಕರಿ ಎರಡೂ ಕಡೆ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಜಾಣ್ಮೆ ಸಹಕಾರಿಯಾಗುತ್ತದೆ. ಸಾಧಕರಾದರೂ ಸಂಬಂಧಗಳು ಬಲಿಯಾಗಬಾರದು ಎಂಬ ಅಂಶ ಜಾಗೃತವಾಗಿರಬೇಕು. ಸಾಮಾಜಿಕ ಸಮೀಕರಣ ಎಲ್ಲರಿಗೂ ಮುಖ್ಯ. ಅನ್ಯ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಸಂಬಂಧಗಳಿಗೆ ಇನ್ನು ಬೆಲೆ ಇದೆ. ಹೀಗಾಗಿ ಸಂಬಂಧಗಳು ಬಲಿಯಾಗದಂತೆ ಕುಟುಂಬ ಮತ್ತು ವೃತ್ತಿಯನ್ನು ನಿರ್ವಹಿಸಬೇಕು ಎಂದು ಕರೆ ನೀಡಿದರು.

ಮಾಜಿ ಅಧ್ಯಕ್ಷೆ, ನಗರಸಭಾ ಸದಸ್ಯೆ ಪಾರ್ವತಮ್ಮ ಮಾತನಾಡಿ, ಇಂದಿನ ಸಮಾಜದಲ್ಲಿ ಮಹಿಳೆಯರು ಬಹುತೇಕ ಎಲ್ಲಾ ರಂಗಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ. ಇದು ಸಾಧ್ಯವಾಗಿದ್ದು ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿರುವ ಹಕ್ಕುಗಳು ಮತ್ತು ಸಮಾನತೆ ಎಂದರು. ಭಾರತದ ವೀರ ಮಹಿಳೆಯರನ್ನು ಸ್ಮರಿಸಿದ ಅವರು ಇಂದಿನ ಮಹಿಳೆಯರು ಸ್ವಾಭಿಮಾನದಿಂದ ಬದುಕಲು ಹೋರಾಟ ನಡೆಸುತ್ತಿದ್ದಾಳೆ. ರಾಜಕೀಯವಾಗಿ ಮಹಿಳೆಯರಿಗೆ ಶೇ 50 ಸಮಾನತೆ ಬೇಕು ಎಂದು ಆಗ್ರಹಿಸಿದರು.

ಕಿರಿಯ ಅಭಿಯಂತರರಾದ ನಿರ್ಮಲಾ ಮಾತನಾಡಿ, ಮಹಿಳೆಯರಿಗೆ ಕುಟುಂಬದಲ್ಲಿ ತಂದೆ, ಸಹೋದರ, ಗಂಡ ಹೀಗೆ ಪುರುಷರಿಂದಲೂ ಆಶ್ರಯ, ಬೆಂಬಲ ದೊರೆಯುತ್ತದೆ. ಇದು ಸಾಧ್ಯವಾಗಬೇಕಾದರೆ ಮಹಿಳೆಯರಲ್ಲಿನ ನಡವಳಿಕೆಯು ಮುಖ್ಯವಾಗುತ್ತದೆ. ಮಹಿಳೆಯರು ಮನಸ್ಸು ಮಾಡಿದರೆ ಯಾವುದು ಅಸಾಧ್ಯವಲ್ಲ ಎಂದರು. ಮಹಿಳಯರಿಗೆ ಕುಟುಂಬದಲ್ಲಿ ಸಂಬಂಧಗಳನ್ನು ನಿರ್ವಹಿಸುವ ಮತ್ತು ಬಹುಕಾರ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ದೇವರು ಶಕ್ತಿ ಕೊಟ್ಟಿದ್ದಾನೆ ಎಂದರು.

ನಗರಸಭೆ ಎಫ್.ಡಿ.ಸಿ ಲಕ್ಷ್ಮೀದೇವಿ ಮಾತನಾಡಿ, ಮಹಿಳೆಯರನ್ನು ಪ್ರೋತ್ಸಾಹಿಸುವ ಎಲ್ಲ ಮನಸ್ಸುಗಳನ್ನು ಗೌರವಿಸಬೇಕು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಸಂವಿಧಾನದ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ಹಕ್ಕುಗಳನ್ನು ಕೊಡಿಸಿದ್ದಾರೆ. ಮಹಿಳೆಯರಿಗೆ ಶಿಕ್ಷಣ, ಅಧಿಕಾರ ಕೊಟ್ಟರೆ ಅವರು ಕರ್ತವ್ಯ ನಿರ್ವಹಿಸುವ ಪ್ರತಿ ಸ್ಥಳವೂ ಅಭಿವೃದ್ಧಿ ಕೇಂದ್ರವಾಗುತ್ತದೆ ಎಂಬುದು ಅಂಬೇಡ್ಕರ್ ಅವರಿಗೆ ಗೊತ್ತಿತ್ತು. ಹೀಗಾಗಿಯೆ ಅವರು ಮಹಿಳೆಯರಿಗೆ ಹಕ್ಕುಗಳನ್ನು ಪ್ರತಿಪಾದಿಸಿದ್ದಾರೆ ಎಂದರು.

ಕಚೇರಿ ವ್ಯವಸ್ಥಾಪಕರಾದ ರೇಖಾ ಅವರು ಮಾತನಾಡಿ, ತಮ್ಮ ಜೀವನಾನುಭವ, ಸತತ ಪ್ರಯತ್ನದಿಂದ ವೃತ್ತಿಪರ ಪರೀಕ್ಷೆಗಳಲ್ಲಿ ಯಶಸ್ವಿಯಾದ ಬಗ್ಗೆ, ತಮ್ಮ ಕಾರ್ಯಾನುಭವಗಳ ಬಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ, ವಿಜಯಕುಮಾರಿ, ಪವಿತ್ರ ಲಕ್ಷ್ಮಿಕಾಂತ್, ಮಂಜುಳಾ ಮಾವಿನಸಸಿ ವೆಂಕಟೇಶ್, ಮಹಾಲಕ್ಷ್ಮಿ ಗೂಳಿಗೌಡ, ನಾಗಮ್ಮ, ಸೋಮಶೇಖರ ಮಣಿ, ಅಜ್ಮತ್, ಮುತ್ತುರಾಜ್ ನಗರಸಭೆ ಅಧಿಕಾರಿಗಳಾದ ನಾಗರಾಜ್, ನಟರಾಜೇಗೌಡ, ಸುಬ್ರಹ್ಮಣ್ಯ, ಸುನೀತಾ, ಪವಿತ್ರ, ವೇದ, ನಾಗರತ್ನ ಸೇರಿದಂತೆ ಸಿಬ್ಬಂದಿಗಳು, ಮಹಿಳಾ ಪೌರಕಾರ್ಮಿಕರು ಉಪಸ್ಥಿತರಿದ್ದರು.

## ಹೆಜ್ಜಾಲದಲ್ಲಿ ಗುಜರಿ ಅಂಗಡಿಗೆ ಬೆಂಕಿ, ಬೆಲೆಬಾಳುವ ವಸ್ತುಗಳು ನಾಶ



ಬಿಡದಿ : ಗುಜರಿ ಅಂಗಡಿಯೊಂದಕ್ಕೆ ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮ ಗೋಡನ್‌ನಲ್ಲಿದ್ದ ಲಕ್ಷಾಂತರ ರೂ. ಬೆಲೆಬಾಳುವ ವಸ್ತುಗಳು ನಾಶವಾಗಿರುವ ಘಟನೆ ಹೆಜ್ಜಾಲ ಸರ್ಕಲ್ ಬಳಿ ಎಸ್‌ವಿಟಿ ಕಾಲೋನಿಯಲ್ಲಿ ಮಂಗಳವಾರ ನಡೆದಿದೆ.

ಬಿಡದಿ ಹೋಬಳಿ ಹೆಜ್ಜಾಲ ಸರ್ಕಲ್ ಬಳಿ ಎಸ್‌ವಿಟಿ ಕಾಲೋನಿಯ ವಸತಿ ಪ್ರದೇಶದಲ್ಲಿ ತಮಿಳುನಾಡು ಮೂಲದ ಮಾಧು ಎಂಬಾತ ಗುಜರಿ ಅಂಗಡಿ ನಡೆಸುತ್ತಿದ್ದು ಮಂಗಳವಾರ ಸಂಜೆ 4 ಗಂಟೆಯ ವೇಳೆಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡು ಅಂಗಡಿಯಲ್ಲಿದ್ದ ವಸ್ತುಗಳು ಅಗ್ನಿಗಾಹುತಿ ಆಗಿವೆ. ವಸತಿ ಪ್ರದೇಶದಲ್ಲಿರುವ ಗುಜರಿ ಅಂಗಡಿಯಲ್ಲಿ ಬೆಂಕಿ ಹೊತ್ತುಕೊಂಡು ದೊಡ್ಡ ಪ್ರಮಾಣದಲ್ಲಿ ಉರಿಯುತ್ತಿದ್ದರಿಂದ ಆಸುಪಾಸಿನ ವಾಸಿಗಳು ಭಯಭೀತರಾಗಿ ಮನೆಯಿಂದ ಹೊರಗೆ ಓಡಿಬಂದು ಆತಂಕಕ್ಕೆ ಒಳಗಾಗಿದ್ದರು.

ಈ ವೇಳೆ ಸ್ಥಳೀಯ ಗ್ರಾಪಂ ಸದಸ್ಯ ಶಾಂತರಾಜುರವರು ತಕ್ಷಣವೇ ಅಗ್ನಿಶಾಮಕ ಠಾಣೆ ಹಾಗೂ ಬಿಡದಿ ಪೊಲೀಸ್ ಠಾಣೆಗೆ ವಿಷಯ ತಿಳಿಸಿದರು. ಸುದ್ಧಿ ತಿಳಿದ ಬಿಡದಿ ಠಾಣೆ ಸಿಪಿಐ ವಿಜಯ್‌ಕುಮಾರ್‌ರವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ದಾವಿಸಿ ಬಂದು ಯಾವುದೇ ಅನಾಹುತವಾಗದಂತೆ ರಕ್ಷಣಾ ಕಾರ್ಯದಲ್ಲಿ ತೊಡಗಿದರು. ಕೂಡಲೇ 3 ಅಗ್ನಿಶಾಮಕ ವಾಹನಗಳಲ್ಲಿ ದಾವಿಸಿ ಬಂದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಗಿಳಿದರು. ಧಗಧಗನೆ ಉರಿಯುತ್ತಿದ್ದ ಬೆಂಕಿಯನ್ನು ಸಿಬ್ಬಂದಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಹರಸಾಹಪಟ್ಟು ನಂದಿಸಿದರು. ತದನಂತರ ಆಸುಪಾಸಿನ ಜನರು ನಿಟ್ಟುಸಿರು ಬಿಟ್ಟರು.

ಅಗ್ನಿ ಅವಘಡದಲ್ಲಿ ಗುಜರಿ ಅಂಗಡಿ ಗೋದಾಮಿನಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ. ಆದರೆ ಯಾವುದೇ ಅನಾಹುತ ಸಂಭವಿಸಿಲ್ಲ. ಸ್ಥಳೀಯ ಗ್ರಾಪಂ ಸದಸ್ಯರ ಸಮಯಪ್ರಜ್ಞೆಗೆ ಹಾಗೂ ಸಕಾಲದಲ್ಲಿ ಆಗಮಿಸಿ ರಕ್ಷಣಾ ಕಾರ್ಯ ಕೈಗೊಂಡ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿಗೆ ಎಸ್‌ವಿಟಿ ಕಾಲೋನಿ ನಿವಾಸಿಗಳು ಕೃತಜ್ಞತೆ ಸಲ್ಲಿಸಿದರು. ಬೆಂಕಿ ಅನಾಹುತಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಗುಜರಿ ಅಂಗಡಿ ಮಾಲೀಕ ಮಾಧು ಎಂಬಾತನನ್ನು ಪೊಲೀಸರು ವಿಚಾರಣೆ ನಡೆಸಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಜಿಲ್ಲಾಸ್ಪತ್ರೆ ಹಾಗೂ ವೈದ್ಯರ ವಿರುದ್ಧ ಎಸ್ ಎಸ್ ಡಿ ಪ್ರತಿಭಟನೆ




ರಾಮನಗರ: ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡದೆ ವಂಚಿಸುತ್ತಿರುವ ಡಿಎಸ್, ಆರ್‌ಎಂಒ, ಜಿಎ ಹಾಗೂ ಡಿಎಚ್‌ಒ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಕೆಲಸಕ್ಕೆ ಹಾಜರಾಗದೆ ಕರ್ತವ್ಯ ಲೋಪವೆಸಗಿರುವ ವೈದ್ಯಾಧಿಕಾರಿ ನಾರಾಯಣಸ್ವಾಮಿ ಅವರನ್ನು ಅಮಾನತು ಮಾಡಬೇಕೆಂದು ಸಮತಾ ಸೈನಿಕ ದಳದ ಮುಖಂಡರು ಹಾಗೂ ಪದಾಧಿಕಾರಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿ ಜಮಾಯಿಸಿದ ವಿವಿಧ ಸಂಘಟನೆ ಮುಖಂಡರು ಹಾಗೂ ಸಮಾತ ಸೈನಿಕ ದಳದ ಮುಖಂಡರು ಮತ್ತು ಕಾರ್ಯಕರ್ತರು ವೈದ್ಯರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ವಿಫಲರಾಗುತ್ತಿರುವ ವೈದ್ಯಾಧಿಕಾರಿಗಳು ಹಾಗೂ ಕರ್ತವ್ಯ ಲೋಪ ಎಸಗಿರುವ ಆರ್‌ಎಂಒ ನಾರಾಯಣಸ್ವಾಮಿ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಮತಾ ಸೈನಿಕ ದಳದ ಯುವ ಘಟಕದ ಜಿಲ್ಲಾಧ್ಯಕ್ಷ ಸುರೇಶ್, ನೂತನ ಜಿಲ್ಲಾಸ್ಪತ್ರೆಯಾಗಿ ಮೂರು ವರ್ಷಗಳೇ ಕಳೆದರೂ ಯಾವುದೇ ಬದಲಾವಣೆಯಾಗಿಲ್ಲ. ರೋಗಿಗಳು ಹಾಗೂ ಸಾರ್ವಜನಿಕರು ದಿನ ನಿತ್ಯ ಪರದಾಡುವುದು ಇನ್ನು ತಪ್ಪಿಲ್ಲ. ಒಬ್ಬ ವ್ಯಕ್ತಿಯು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾದರೆ ವೈದ್ಯರನ್ನು ಭೇಟಿಯಾಗಬೇಕು. ಆದರೆ ಸೇವೆಯನ್ನು ನೀಡುವ ವೈದ್ಯರೇ ಬೆಳಿಗ್ಗೆ ಹಾಜರಾತಿಯನ್ನು ಹಾಕಿ ಖಾಸಗಿ ಆಸ್ಪತ್ರೆಗೆ ತೆರಳುತ್ತಿದ್ದಾರೆ. ಸರ್ಕಾರದಿಂದ ಸಂಬಳ ಪಡೆಯುವ ಇವರು ರೋಗಿಗಳ ಸೇವೆ ಮಾಡುವ ಬದಲು ಖಾಸಗಿ ಆಸ್ಪತ್ರೆಯವರ ಸೇವೆ ಮಾಡುತ್ತಿದ್ದಾರೆ. ವೈದ್ಯರು ಸೇರಿದಂತೆ ಸಿಬ್ಬಂದಿಗಳು ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ನೀಡುತ್ತಿಲ್ಲ, ವೈದ್ಯರು ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗುವುದಿಲ್ಲ ಎಂದು ಕಿಡಿಕಾರಿದರು.

ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಉಚಿತ ಸೇವೆ ನೀಡಬೇಕೆಂದು ಸರ್ಕಾರದಿಂದ ಆದೇಶವಿದೆ. ಆದರೆ ಉತ್ತಮ ಆರೋಗ್ಯ ಸೇವೆ ನೀಡುವಲ್ಲಿ ಜಿಲ್ಲಾಸ್ಪತ್ರೆ ವಿಫಲವಾಗಿದೆ. ಆಸ್ಪತ್ರೆಯ ಅನೇಕ ಸಿಬ್ಬಂದಿ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಮಾತ್ರೆಗಳು, ಲ್ಯಾಬ್ ಸೌಲಭ್ಯ ಒದಗಿಸದೆ ಖಾಸಗಿ ಮೆಡಿಕಲ್ ಮತ್ತು ಲ್ಯಾಬ್ ಗಳಿಂದ ಕಮೀಷನ್ ಪಡೆಯುತ್ತಿದ್ದಾರೆ. ಬಡವರ ರಕ್ತ ಹಿರುವ ಇಂತಹ ವೈದ್ಯರುಗಳ ಮೇಲೆ ಕೂಡಲೇ ಸೂಕ್ತ ಕ್ರಮವಾಗಬೇಕು ಎಂದು ಆಗ್ರಹಿಸಿದರು.

ರೋಗಿಗಳಿಗೆ ಅಗತ್ಯ ಔಷಧೋಪಚಾರ ಆಸ್ಪತ್ರೆಯಲ್ಲಿ ದೊರಕಬೇಕು. ಕೆಟ್ಟು ನಿಂತಿರುವ ಆಂಬುಲೆನ್ಸ್‌ಗಳನ್ನು ರಿಪೇರಿ ಮಾಡಿಸಿ ರೋಗಿಗಳ ತುರ್ತು ಚಿಕಿತ್ಸೆಗೆ ಲಭ್ಯಗೊಳಿಸಬೇಕು. ಕುಡಿಯುವ ನೀರು ಸೇರಿದಂತೆ ಹಲವು ನ್ಯೂನತೆಗಳನ್ನು ಸರಿಪಡಿಸಿ ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆ ದೊರಕಬೇಕು. ಈ ನಿಟ್ಟಿನಲ್ಲಿ ಇಲ್ಲಿನ ಅವ್ಯವಸ್ಥೆಗಳನ್ನ ಸರಿಪಡಿಸಬೇಕು ಹಾಗೂ ನಿರ್ಲಕ್ಷ್ಯ ತೋರುತ್ತಿರುವ ಡಿಎಸ್, ಆರ್‌ಎಂ, ಜಿಎ ಹಾಗೂ ಡಿಎಚ್‌ಒ ವಿರುದ್ಧ ಶಿಸ್ತು ಕ್ರಮ ಕೂಡಲೇ ತೆಗೆದುಕೊಳ್ಳದಿದ್ದಲ್ಲಿ ಉಗ್ರ ಹೋರಾಟದ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ದಲಿತ ಮುಖಂಡರಾದ ಹರೀಶ್ ಬಾಲು, ಲೋಕೇಶ್, ಪರಮೇಶ್, ಪುನೀತ್, ಕಿರಣ್ ಸಾಗರ್, ವಿನೋದ್, ನಂಜುಂಡಯ್ಯ, ಶಂಕರ್ ಮೌರ್ಯ, ಪ್ರಸಾದ್, ಪದ್ಮಾವತಿ, ಪೂರ್ಣಿಮಾ ಸೇರಿದಂತೆ ಹಲವರಿದ್ದರು.

## ಮಾ.12–13ರಂದು ಕನ್ನಡ ಸಾಹಿತ್ಯ–ಬೇಸಾಯದ ಬದುಕು ಶಿಬಿರ

ರಾಮನಗರ : ತಾಲ್ಲೂಕಿನ ಕೃಷ್ಣಾಪುರದೊಡ್ಡಿಯ ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ 'ಕನ್ನಡ ಸಾಹಿತ್ಯ ಮತ್ತು ಬೇಸಾಯದ ಬದುಕು' ಕುರಿತು ಎರಡು ದಿನಗಳ ಅಧ್ಯಯನ ಶಿಬಿರವನ್ನು ಮಾರ್ಚ್ 12 ಮತ್ತು 13ರಂದು ಹಮ್ಮಿಕೊಳ್ಳಲಾಗಿದೆ.

ಕೆರೆಮೇಗಳದೊಡ್ಡಿಯ ಮುದ್ದುಶ್ರೀ ದಿಬ್ಬದಲ್ಲಿ ನಡೆಯಲಿರುವ ಈ ಶಿಬಿರವನ್ನು 12ರಂದು ಬೆಳಿಗ್ಗೆ 11.30ಕ್ಕೆ ರೈತ ಹೋರಾಟಗಾರ್ತಿ ಅನಸೂಯಮ್ಮ ಉದ್ಘಾಟಿಸಲಿದ್ದಾರೆ. ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಮಂಜುನಾಥಸ್ವಾಮಿ ಬಿ.ಎಸ್ ಹಾಗೂ ಹಿರಿಯ ಸಾಹಿತಿ ಪ್ರೊ.ಶಿವರಾಮಯ್ಯ ಭಾಗವಹಿಸಲಿದ್ದಾರೆ. ಅಕಾಡೆಮಿ ಸದಸ್ಯ ಸಂಚಾಲಕ ಡಾ.ರವಿಕುಮಾರ ಬಾಗಿ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಡಾ. ಚನ್ನಪ್ಪ ಅಂಗಡಿ ಶಿಬಿರದ ಕುರಿತು ಮಾತನಾಡಲಿದ್ದಾರೆ. ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಬೈರೇಗೌಡ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಉಪಸ್ಥಿತರಿರುತ್ತಾರೆ.

ಮಧ್ಯಾಹ್ನ ಗೋಷ್ಠಿಯಲ್ಲಿ ಕನ್ನಡದ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕೃಷಿಯ ಸ್ವರೂಪ ಡಾ.ಚಂದ್ರಶೇಖರ ನಂಗಲಿ, ಕನ್ನಡ ಜಾನಪದ ಸಾಹಿತ್ಯ ಮತ್ತು ಕೃಷಿ ಸಂಸ್ಕೃತಿ ಡಾ.ಟಿ.ಗೋವಿಂದರಾಜು, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕೃಷಿ ಸಂಸ್ಕೃತಿ ಕುರಿತು ಡಾ.ಚನ್ನಪ್ಪ ಅಂಗಡಿ ವಿಷಯ ಮಂಡಿಸಲಿದ್ದಾರೆ. ಸಂಜೆಗೆ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ.

13ರಂದು ಬೆಳಿಗ್ಗೆ ಆಧುನಿಕ ಸಾಹಿತ್ಯದಲ್ಲಿ ಕೃಷಿ ಬದುಕಿನ ಅನುಭವಗಳು ಮುರ್ತುಜಾ ಬೇಗಂ ಕೊಡಗಲಿ, ಕನ್ನಡದಲ್ಲಿ ಕೃಷಿ ಬರವಣಿಗೆ ಕುರಿತು ಡಾ.ನೂರ್ ಸಮದ್ ಅಬ್ಬಲಗೆರೆ, ಜಾಗತೀಕರಣ ಮತ್ತು ಕೃಷಿ ಬಿಕ್ಕಟ್ಟುಗಳು ಕುರಿತು ಡಾ.ರವಿಕುಮಾರ್ ಬಾಗಿ ವಿಷಯ ಮಂಡಿಸಲಿದ್ದಾರೆ. ಸಾಹಿತ್ಯ ಮತ್ತು ಕೃಷಿ ಸಾಧಕರೊಂದಿಗೆ ನಡೆಯುವ ಸಂವಾದ ಕಾರ್ಯಕ್ರಮವನ್ನು ಲೇಖಕ ಮಂಜುನಾಥ್ ಅದ್ದೆ ನಡೆಸಿಕೊಡಲಿದ್ದಾರೆ. ಸಂವಾದದಲ್ಲಿ ಬಿಬಿಜಾನ್ ಮೌಲಾಸಾಬ ಹಳೆಮನಿ, ಡಾ.ಸ್ವಾಮಿ ಅನಂದ, ಶಾಂತಮ್ಮ, ಪ್ರಸನ್ನಾಭಟ್, ಸಹನಾ ಕಾಂತಬೈಲು, ಚಂಸು ಪಾಟೀಲ, ದೊ.ಚಿ.ಗೌಡ ಭಾಗವಹಿಸುವರು.

ಸಂಜೆ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ರೈತ ಹೋರಾಗಾರ್ತಿ ಚುಕ್ಕಿ ನಂಜು0ಡಸ್ವಾಮಿ ಭಾಗವಹಿಸಲಿದ್ದಾರೆ. ಟ್ರಸ್ಟ್ ಅಧ್ಯಕ್ಷ ಬೈರೇಗೌಡ ಅಧ್ಯಕ್ಷತೆ ವಹಿಸುವರು. ಡಾ. ನೂರ್ ಸಮದ್ ಅಬ್ಬಲಗೆರೆ, ಡಾ. ಎಲ್.ಎನ್.ಮುಕುಂದರಾಜ್, ಡಾ.ರವಿಕುಮಾರ್ ಬಾಗಿ ಉಪಸ್ಥಿತರಿರುತ್ತಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

### ನಿಧನ

ರಾಮನಗರ : ತಾಲ್ಲೂಕಿನ ಬೆಜ್ಜರಹಳ್ಳಿ ಕಟ್ಟೆ ಗ್ರಾಮದ ಕೃಷ್ಣಪ್ಪ ಅವರ ಧರ್ಮಪತ್ನಿ ವಿಜಯಮ್ಮ 65 ವರ್ಷ ( ಪತ್ರಕರ್ತ ಅರುಣ್ ಅವರ ತಾಯಿ) ಅವರು ಮುಂಜಾನೆ ವಿಧಿವಶರಾದರು.

ಮೃತ ವಿಜಯಮ್ಮ ಅವರು ಪತಿ ಕೃಷ್ಣಪ್ಪ, ಮಕ್ಕಳಾದ ಕಿರಣ್ ಮತ್ತು ಪತ್ರಕರ್ತ ಕೆ.ಅರುಣ್ ಸೇರಿದಂತೆ ತುಂಬು ಕುಟುಂಬವನ್ನು ಅಗಲಿದ್ದಾರೆ. ಮಾಜಿ ಶಾಸಕ ಎ.ಮಂಜುನಾಥ್, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ (ಶಶಿ), ಮಾಜಿ ಉಪಾಧ್ಯಕ್ಷೆ ಆಯಿಷಾಭಾನುಶಫಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ , ಮಾಜಿ ಅಧ್ಯಕ್ಷ ರಾಜಶೇಖರ್, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ ಸೇರಿದಂತೆ ನಗರಸಭಾ ಸದಸ್ಯರು, ಜಿಲ್ಲೆಯ ಪತ್ರಕರ್ತರು, ಸಂಘ ಸಂಸ್ಥೆಗಳ ಮುಖ್ಯಸ್ಥರು, ಸ್ನೇಹಿತರು, ಬಂಧು ಬಳಗದವರು ಮೃತರ ಅಂತಿಮ ದರ್ಶನ ಪಡೆದರು. ಹಿಂದೂ ಸಂಪ್ರದಾಯದಂತೆ ವಿಜಯಮ್ಮ ಅವರ ಅಂತ್ಯಕ್ರಿಯೆ ಮಧ್ಯಾಹ್ನ ನೆರವೇರಿತು.

# ಗಮನ ಸೆಳೆದ ಗಿರಿಧಾರಿ ಭರತನಾಟ್ಯ ನೃತ್ಯ ನಾಟಕದ ಪ್ರದರ್ಶನ

## ತುಮಕೂರಿನ ವರ್ಷಾ ರವಿಪ್ರಕಾಶ್ ಕಲಾತ್ಮಕತೆಗೆ ತಲೆದೂಗಿದ ಪ್ರೇಕ್ಷಕ



ತುಮಕೂರು: ನಗರದ ಪ್ರಸಿದ್ಧ ಅಂತರಾಷ್ಟ್ರೀಯ ಭರತನಾಟ್ಯ ಕಲಾವಿದೆ, ಸ್ವರವಿ ಆರ್ಟ್ಸ್ ಫೌಂಡೇಶನ್ ಸಂಸ್ಥಾಪಕಿ ಹಾಗೂ ಕಲಾತ್ಮಕ ನಿರ್ದೇಶಕಿ, ವಿದುಷಿ ವರ್ಷ ರವಿಪ್ರಕಾಶ ಅವರುಪಾರಂಪರ್ಯ ಕಲಾತ್ಮಕತೆ ಮತ್ತು ತಂತ್ರಜ್ಞಾನದ ಅದ್ಭುತ ಸಂಯೋಜನೆಯ ಮೂಲಕ 'ಗಿರಿಧಾರಿ' ಭರತನಾಟ್ಯದ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಇತ್ತೀಚಿಗೆ ಯಶಸ್ವಿಯಾಗಿ ಪ್ರದರ್ಶನ ಮಾಡಿದರು. ದೃಶ್ಯ ವೈಭವ ಮತ್ತು ಆಧ್ಯಾತ್ಮಿಕ ಆಳವನ್ನು ಒಟ್ಟುಗೂಡಿಸಿದ ವಿಶಿಷ್ಟ ಭರತನಾಟ್ಯ ನೃತ್ಯ ನಾಟಕವಾಗಿ ಮೇಳೈಸಿತು.

ಬೆಂಗಳೂರಿನ ದಯಾನಂದಸಾಗರ ಆಡಿಟೋರಿಯಂನಲ್ಲಿ ಸ್ವರವಿ ಆರ್ಟ್ಸ್ ಫೌಂಡೇಶನ್ ರವರು ನಿರ್ಮಿಸಿದ ಈ ಭರತನಾಟ್ಯ ಪ್ರದರ್ಶನವು, ಗೋವರ್ಧನಗಿರಿ ಕಥೆಯ ಹಿನ್ನೆಲೆಯಲ್ಲಿ "ರಾಧೆ ಕೃಷ್ಣನನ್ನು ಏಕೆ ಅಷ್ಟೊಂದು ಪ್ರೀತಿಸುತ್ತಾಳೆ?" ಎಂಬ ಗಹನವಾದ ಪ್ರಶ್ನೆಯನ್ನು ಅನ್ವೇಷಿಸಿತು. ಮನಮೋಹಕ ನೃತ್ಯ ವಿನ್ಯಾಸ, ಮೂಲ ಸಂಗೀತ ಮತ್ತು ಡಿಜಿಟಲ್ ಗ್ರಾಫಿಕ್ಸ್‌ಗಳ ಮೂಲಕ ಪೌರಾಣಿಕ ಕತೆಯನ್ನು ಪ್ರೇಕ್ಷಕರ ಮುಂದೆ ಜೀವಂತವಾಗಿ ಪ್ರದರ್ಶನ ಮಾಡುವಲ್ಲಿ ವಿದುಷಿ ವರ್ಷ ರವಿಪ್ರಕಾಶ್ ನೇತೃತ್ವದ ಭರತನಾಟ್ಯ ಕಲಾವಿದರ ತಂಡ ಯಶಸ್ವಿಯಾಯಿತು.

ಸಂಸ್ಥಾಪಕಿ ಹಾಗೂ ಕಲಾತ್ಮಕ ನಿರ್ದೇಶಕಿ, ವಿದುಷಿ ವರ್ಷ ರವಿಪ್ರಕಾಶ ಮತ್ತು ಕ್ರಿಯೇಟಿವ್ ನಿರ್ದೇಶಕ ಸುಹಾಸ್ ಜೆ. ಅವರ ಸಂಯುಕ್ತ ನೃತ್ಯ ಸಂಯೋಜನೆಯಲ್ಲಿ ಮೂಡಿಬಂದ ಈ ಪ್ರದರ್ಶನ, ಯುವ ಕಲಾವಿದರ ಧೈರ್ಯಶಾಲಿ ಪ್ರಯೋಗವಾಗಿ ಗಮನ ಸೆಳೆದಿತು. ಇಂದ್ರಲೋಕ, ಭೂಲೋಕ ಹಾಗೂ ಈ ಸನ್ನಿವೇಶಕ್ಕೆ ಪೂರಕವಾದ ದೃಶ್ಯಾವಳಿಗಳನ್ನು ಹೋಲೋಗ್ರಾಫಿಕ್ ತಂತ್ರಜ್ಞಾನದ ಮೂಲಕ ಜೀವಂತಗೊಳಿಸಿ, ದೇವಲೋಕದ ಪಾತ್ರಗಳು ಮನಸ್ಸಿನಲ್ಲಿ ಕಲ್ಪಿಸುವಂತೆಯೇ ಕಾಣಿಸುವಂತೆ ಆಕರ್ಷಕವಾಗಿ ವಿನ್ಯಾಸ ಮಾಡಿದ್ದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ವೇದಿಕೆಯ ಮೇಲೆ ನೈಜ ಗೋಕುಲವೇ ಮೂಡಿಬಂದ ಅನುಭವವನ್ನು ಸೃಷ್ಟಿಸಲಾಯಿತು. ಲೈಟಿಂಗ್ ವಿನ್ಯಾಸವನ್ನು ಸೂರ್ಯ ಎನ್. ರಾವ್ ನಿರ್ವಹಿಸಿದರೆ, ಸಂಗೀತವನ್ನು ವೆಂಕಿ.ಜಿ.ಜಿ ಸಂಯೋಜಿಸಿದ್ದರು. ಮುಸ್ತಫಾ ಖಾನ್ ಕಲಾ ನಿರ್ದೇಶನ ಮಾಡಿದ್ದರು. 75 ಭರತನಾಟ್ಯ ನೃತ್ಯಗಾರರು ಮತ್ತು 100ಕ್ಕೂ ಹೆಚ್ಚು ಕಲಾವಿದರು ಮತ್ತು ತಂತ್ರಜ್ಞರ ತಂಡವನ್ನು ಒಟ್ಟುಗೂಡಿಸಿ, ಶಾಸ್ತ್ರೀಯ ಶುದ್ಧತೆಯನ್ನು ವಿಸ್ತಾರವಾದ ಸಮಕಾಲೀನ ರಂಗಕಲೆಯೊಂದಿಗೆ ಸಂಯೋಜಿಸಿ ಆಳವಾದ ತಲ್ಲೀನಗೊಳಿಸುವ ಅನುಭವವನ್ನು ಈ 'ಗಿರಿಧಾರಿ'ಯಲ್ಲಿ ಸೃಷ್ಟಿಸಲಾಯಿತು. ಪರಂಪರೆ ಮತ್ತು ತಂತ್ರಜ್ಞಾನ ಒಂದಾಗಿ ಸಾಗಬಹುದೆಂಬ ಹೊಸ ಅಧ್ಯಾಯವನ್ನು ನಿರ್ಮಿಸಿತು.

ಪ್ರದರ್ಶನ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಕಲಾವಿದೆ ವರ್ಷಾ ರವಿಪ್ರಕಾಶ್, 'ಭರತನಾಟ್ಯಕ್ಕೆ ಮಿತಿ ಇಲ್ಲ ಎಂಬುದನ್ನು ತೋರಿಸುವ ಕನಸಿನಿಂದ 'ಗಿರಿಧಾರಿ' ಹುಟ್ಟಿತು. ಪರಂಪರೆ ಮತ್ತು ಕಲ್ಪನೆ ಒಂದಾದಾಗ ವೇದಿಕೆಯಲ್ಲಿ ಮಂತ್ರಮುಗ್ಧ ಕ್ಷಣಗಳು ಸೃಷ್ಟಿಯಾಗುತ್ತವೆ ಎಂದರು.

ಭರತನಾಟ್ಯದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ನಡೆದ ಪ್ರಯೋಗವಾಗಿತ್ತು.



### ಪುರಾಣದ ಸಂವೇದನಾ ಅನುಭವ



ಲಯ ಮತ್ತು ಭಾವನೆಗೆ ಪ್ರತಿಕ್ರಿಯಿಸುವ ತಂತ್ರಜ್ಞಾನ, ಚಾಲಿತ ಸಂವಾದಾತ್ಮಕ ದೃಶ್ಯಗಳನ್ನು ಬಳಸಿಕೊಂಡು ಶಾಸ್ತ್ರೀಯ ಚಲನೆ ಮತ್ತು ತಲ್ಲೀನಗೊಳಿಸುವ ದೃಶ್ಯ ಕಥೆ ಹೇಳುವಿಕೆಯ ನವೀನ ಮಿಶ್ರಣಕ್ಕಾಗಿ ಇದು ಪ್ರಶಂಸನೆಯ ಪ್ರದರ್ಶನ. ನೃತ್ಯದೊಂದಿಗೆ ನೈಜ ಸಮಯದಲ್ಲಿ ವಿಕಸನಗೊಂಡ ವೈಶಿಷ್ಟ್ಯಪೂರ್ಣ ಕ್ರಿಯಾತ್ಮಕ ದೃಶ್ಯಗಳು, ವೇದಿಕೆಯನ್ನು ಪುರಾಣದ ಸಂವೇದನಾ ಅನುಭವವಾಗಿ ಪರಿವರ್ತಿಸಿದವು.

ಡಾ. ಎಲ್. ಸಂಜೀವಕುಮಾರ್
ಪ್ರಾಂಶುಪಾಲರು, ಶ್ರೀ ಸಿದ್ಧಾರ್ಥ ಸ್ಕೂಲ್ ಆಫ್ ಇಂಜಿನಿಯರಿಂಗ್, ತುಮಕೂರು.

### ಗಿರಿಧಾರಿ ಭರತನಾಟ್ಯ ನೃತ್ಯ ನಾಟಕದ ಪ್ರದರ್ಶನದಲ್ಲಿ ಪಾಲ್ಗೊಂಡವರ ಅನಿಸಿಕೆಗಳು:

ಭರತನಾಟ್ಯ ಕಲಾವಿದೆ ವರ್ಷಾ ರವಿಪ್ರಕಾಶ್ ಮತ್ತು ಅವರ ತಂಡದ ಅದ್ಭುತ ಪ್ರದರ್ಶನವನ ್ನ ಮೆಚ್ಚಿಕೊಳ್ಳಲು ಪದಗಳೇ ಸಾಲುತ್ತಿಲ್ಲ. ಡಿಜಿಟಲ್ ತಂತ್ರಜ್ಞಾನ ಮತ್ತು ಕಲೆಯ ಅದ್ಭುತ ಮಿಶ್ರಣ. ವೇಷಭೂಷಣಗಳು, ಧ್ವನಿ ಮತ್ತು ಬೆಳಕು ಚೆನ್ನಾಗಿತ್ತು. ಪ್ರದರ್ಶನದ ಸಮಯದಲ್ಲಿ ಕಲಾವಿದರನ್ನು ಸುತ್ತಲೂ ನೋಡಿ ಪ್ರೇಕ್ಷಕರು ಮುಗಿಬಿದ್ದರು. ವಾಹ್, ಇದು ನಿಜವಾಗಿಯೂ ತುಂಬಾ ಸ್ಫೂರ್ತಿದಾಯಕ ಕ್ಷಣವಾಗಿತ್ತು. ಇದು ತುಂಬಾ ಒಳ್ಳೆಯ ತಂತ್ರ. ಪ್ರತಿ ಅನುಕ್ರಮದಲ್ಲೂ ಉತ್ತಮ ಪ್ರಯತ್ನಗಳು ಮತ್ತು ಯೋಜನೆ ಗೋಚರಿಸುತ್ತದೆ. ಒಂದು ಸುಂದರವಾದ ಸಂಜೆಯನ್ನು ನಮ್ಮ ಜೀವನದಲ್ಲಿ ಅತ್ಯಂತ ಸ್ಮರಣೀಯವಾಗಿಸಿದ್ದಕ್ಕಾಗಿ ಧನ್ಯವಾದಗಳು.

–ಡಾ. ಕರುಣಾಕರ್, ಪ್ರಾಧ್ಯಾಪಕರು, ಶ್ರೀ ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜು, ತುಮಕೂರು.




ಅತ್ಯುನ್ನತ ಮಟ್ಟಕ್ಕೆ ಮನಸ್ಸಿಗೆ ಮುದ ನೀಡುವ ಗಿರಿಧಾರಿ ಪ್ರದರ್ಶನವು ಅನೇಕ ಸೃಜನಶೀಲ ರಚನೆಗಳು, ಅಭಿವ್ಯಕ್ತಿಗಳು ಮತ್ತು ಪರಿವರ್ತನೆಗಳ ಮೂಲಕ ಶಕ್ತಿಯುತ, ಅರ್ಥಪೂರ್ಣ ಮತ್ತು ಸುಂದರವಾಗಿ ಚಿತ್ರಿಸಲ್ಪಟ್ಟ ಪ್ರದರ್ಶನವಾಗಿತ್ತು. ನೃತ್ಯ ಕಲಾವಿದರು ಪರಿಕಲ್ಪನೆಯನ್ನು ಜೀವಂತಗೊಳಿಸಿದ ರೀತಿ ಸ್ಫೂರ್ತಿದಾಯಕ ಮತ್ತು ಚಿಂತನಶೀಲವಾಗಿತ್ತು. ವೇಷಭೂಷಣಗಳು, ಸಂಗೀತ ಮತ್ತು ಸಿಂಕ್ರೊನೈಸೇಶನ್ ಸಂಪೂರ್ಣವಾಗಿ ಮಿಶ್ರಣಗೊಂಡು, ಮೋಡಿ ಮಾಡುವ ದೃಶ್ಯ ಮತ್ತು ಭಾವನಾತ್ಮಕ ಅನುಭವವನ್ನು ಸೃಷ್ಟಿಸಿತು. ಇದು ಕೇವಲ ಪ್ರದರ್ಶನವಾಗಿರಲಿಲ್ಲ – ಇದು ಚಲನೆಯ ಮೂಲಕ ಅತ್ಯುತ್ತಮವಾಗಿ ಕಥೆ ಹೇಳುವುದಾಗಿತ್ತು.

–ಡಾ. ಸುಪ್ರಿಯಾ, ಪ್ರಾಧ್ಯಾಪಕರು, ಶ್ರೀ ಸಿದ್ದಾರ್ಥ ಇಂಜಿನಿಯರಿಂಗ್ ಕಾಲೇಜು, ತುಮಕೂರು.

# ಪಿಯುಸಿ ಪರೀಕ್ಷೆ : ರಾಜ್ಯದ ವೆಬ್ ಕಾಸ್ಟಿಂಗ್ ವ್ಯವಸ್ಥೆ ಬಗ್ಗೆ ಕೇಂದ್ರ ತಂಡ ಹರ್ಷ

ತುಮಕೂರು :ಪಿಯುಸಿ ಪರೀಕ್ಷೆಗಳು ನಡೆಯುತ್ತಿದ್ದು, ಪರೀಕ್ಷಾ ಕೊಠಡಿಗಳನ್ನುವೀಕ್ಷಣೆ ಮಾಡಲು ತುಮಕೂರು ಜಿಲ್ಲಾ ಪಂಚಾಯಿತಿ ಸಂಪನ್ಮೂಲ ಕೇಂದ್ರದಲ್ಲಿ ತೆರೆದಿರುವ ವೆಬ್ ಕಾಸ್ಟಿಂಗ್ ವ್ಯವಸ್ಥೆಯನ್ನು ವೀಕ್ಷಿಸಿದಉತ್ತರ ಭಾರತದ ಕೇಂದ್ರ ತಂಡ ಹರ್ಷ ವ್ಯಕ್ತಪಡಿಸಿದೆ.
ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ವೆಬ ಕ್ಯಾಸ್ಟಿಂಗ್ ವ್ಯವಸ್ಥೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಲು ದಿನಾಂಕ: 10.03.2026 ರಿಂದ 11.03.2026 ರವರೆಗೆ 02ದಿನಗಳು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದ ತಂಡ ಆಗಮಿಸಿದೆ. ಭಾರತ ಸರ್ಕಾರದ ಭಾರತ ಆಡಳಿತ ಸೇವೆಯ ಉಪ ಕಾರ್ಯದರ್ಶಿ ಹಂತದ ಇಬ್ಬರು ಅಧಿಕಾರಿಗಳು ಇದ್ದು ಪರೀಕ್ಷೆ ನಕಲು ಅಥವಾ ಯಾವುದೇ ಗೊಂದಲವಿಲ್ಲದೆ ಪರೀಕ್ಷೆ ನಡೆಸುವ ಕರ್ನಾಟಕ ಸರ್ಕಾರದ ವೆಬ್ ಕ್ಯಾಸ್ಟಿಂಗ್ ವೀಕ್ಷಣೆ ಮಾಡಿದರು.
10.03.2026 ರಂದು ಅರ್ಥಶಾಸ್ತ್ರ ವಿಷಯದ ಪರೀಕ್ಷೆ ನಡೆಯುತ್ತಿದ್ದು, ಕೇಂದ್ರ ತಂಡದ ಅಧಿಕಾರಿಗಳು ಪರೀಕ್ಷಾ ಕೊಠಡಿಯ ಮೇಲ್ವಿಚಾರಕರೊಂದಿಗೆ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮೂಲಕ ಸಂಪರ್ಕ ಮಾಡಿ ಪರೀಕ್ಷಿಸಿದರು. ನಗರದ ಸರ್ವೋದಯ ಮತ್ತು ಎಂಪ್ರೆಸ್ ಪದವಿ ಪೂರ್ವ ಕಾಲೇಜುಗಳಲ್ಲಿ ನಡೆಯುತ್ತಿರುವ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಕೇಂದ್ರ ತಂಡವು ವೀಕ್ಷಣೆ ನಡೆಸಿತು.



ಉತ್ತರ ಪ್ರದೇಶ ಹಾಗೂ ಬಿಹಾರ ಶ್ರೇಣಿಯ ಅಧಿಕಾರಿಗಳು ತಂಡದಲ್ಲಿದ್ದು ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಗಳಿಗೆ ವೆಬ್ ಕ್ಯಾಸ್ಟಿಂಗ್ ಅಳವಡಿಸಿಕೊಳ್ಳುವ ಉದ್ದೇಶವಿದ್ದು ಇದನ್ನು ಜಾರಿಗೆ ತಂದು ಕರ್ನಾಟಕ ಸರ್ಕಾರ ಯಶಸ್ವಿಯಾಗಿದ್ದು ಮಾದರಿಯಾಗಇದೆ ಎಂದು ತಂಡದ ಅಧಿಕಾರಿಗಳು ತಿಳಿಸಿದರು.
ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಶ್ವಿಜಾ ಬಿ.ವಿ, ಚಿತ್ರದುರ್ಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಆಕಾಶ್, , ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಬಾಲ ಗುರುಮೂರ್ತಿಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಸಂದರ್ಭದಲ್ಲಿದ್ದರು.

## "ಶ್ರೀ ಶಿವಕುಮಾರ ಚರಿತ ಆಧುನಿಕ ಷಟ್ಪದಿ ಕಾವ್ಯ"

ಪರಮಪೂಜ್ಯ ನಡೆದಾಡುವ ದೇವರೇ ಆಗಿದ್ದ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರನ್ನು ಕುರಿತು ನಿ.ಮುಖ್ಯಶಿಕ್ಷಕರಾದ ಶರಣ ಕವಿ ಮುದ್ದೇನಹಳ್ಳಿ ನಂಜಯ್ಯ ಆದ ನಾನು ಶ್ರೀಶ್ರೀಗಳ ವ್ಯಕ್ತಿತ್ವವನ್ನು 111 ಪದ್ಯಗಳಲ್ಲಿ ಆಧುನಿಕ ಕಾಲಕ್ಕೆ ತಕ್ಕಂತೆ ವಾರ್ಧಕ ಷಟ್ಪದಿಯಲ್ಲಿ ರಚಿಸಿ ಸ್ವಾಮೀಜಿಯವರ ಕೃಪೆಗೆ ಪಾತ್ರನಾದೆ ಎಂದು ಮು.ಬ.ನಂ. ನುಡಿದರು. ಅವರು ತುಮಕೂರು ಜಿಲ್ಲಾ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಮಾದೇನಹಳ್ಳಿ ಮಲ್ಲಿಕಾರ್ಜುನಯ್ಯ ಪ್ರತಿಷ್ಠಾನ ದತ್ತಿ, ಬೆಂಗಳೂರು ಇವರ ಸಹಯೋಗದಲ್ಲಿ ತುಮಕೂರಿನ ಶ್ರೀ ಸಿದ್ಧಗಂಗಾ ಡಿ.ಇಡಿ., ಕಾಲೇಜಿನಲ್ಲಿ ನಡೆದ ದತ್ತಿ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಮಾತನಾಡುತ್ತಾ ಸಿದ್ಧಗಂಗಾ ಮಠದಲ್ಲಿ ಓದಿ ವಿದ್ಯಾವಂತನಾಗಿ ಶ್ರೀಗಳನ್ನು ತುಂಬಾ ಹತ್ತಿರದಿಂದ ನೋಡಿ ಅವರ ಕುರಿತು ಕಾವ್ಯ ರಚಿಸಿದ್ದು ಸಾರ್ಥಕವಾಯಿತು ಎಂದರು.
ಅಧ್ಯಕ್ಷ ಸ್ಥಾನದಿಂದ ಪ್ರಭಾರಿ ಉಪ ಪ್ರಾಂಶುಪಾಲರಾದ ಶ್ರೀ ಕಿರಣ್‌ಕುಮಾರ್‌ರವರು ಮಾತನಾಡುತ್ತಾ ಶ್ರೀಗಳ ವ್ಯಕ್ತಿತ್ವವನ್ನು ಮಾತಿನಿಂದ ಅಳೆಯಲು ಸಾಧ್ಯವಿಲ್ಲ. ಅವರೊಂದು ಜಂಗಮತತ್ವದ ಮೇರುಪರ್ವತ ಎಂದರು. ಕನ್ನಡ ಉಪನ್ಯಾಸಕರಾದ ಶ್ರೀ ಕಲ್ಲಪ್ಪನವರು ಮಾತನಾಡಿ ಸಿದ್ಧಗಂಗಾ ಗುರುಪರಂಪರೆಯಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳ ಶಿಷ್ಯ ವಾತ್ಸಲ್ಯದಿಂದ ಲಕ್ಷಾಂತರ ಬಡಮಕ್ಕಳಿಗೆ ತ್ರಿವಿಧ ದಾಸೋಹ ನೀಡಿದ ಅಭಿನವ ಬಸವಣ್ಣನವರೇ ಆಗಿದ್ದರು ಎಂದರು. ಹಂ.ಸಿ.ಕುಮಾರಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು.
ಕಾರ್ಯಕ್ರಮದಲ್ಲಿ ವಿಶೇಷವಾಗಿ ಮು.ಬ.ನಂ. ವಿರಚಿತ ಶ್ರೀ ಶಿವಕುಮಾರ ಚರಿತದ ಆಯ್ದ ಪದ್ಯಗಳಿಗೆ ತುಮಕೂರಿನ ಗಮಕ ಕಲಾಶ್ರೀ ಶ್ರೀಮತಿ ಲಕ್ಷ್ಮೀಜೈಪ್ರಕಾಶ್ ಭಕ್ತಿಭಾವ ತುಂಬಿ ವಾಚನ ಮಾಡಿದರು. ಸರಳವಾಗಿ ಆ ಪದ್ಯಗಳಿಗೆ ತಕ್ಕಂತೆ ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗಮಕ ಕಲಾಶ್ರೀ ವಿದ್ವಾನ್ ಎಂ.ಜಿ.ಸಿದ್ಧರಾಮಯ್ಯನವರು ವಿದ್ವತ್‌ಪೂರ್ಣ ವ್ಯಾಖ್ಯಾನ ನೀಡಿದರು. ಈ ವಿನೂತನ ಕಾರ್ಯಕ್ರಮದಿಂದ ಎಲ್ಲಾ ಡಿ.ಇಡಿ. ವಿದ್ಯಾರ್ಥಿಗಳು ಭಾವಪರವಶರಾದರು. ದತ್ತಿ ದಾನಿಗಳಾದ ಶ್ರೀ ಎಂ.ರೇಣುಕಾರಾಧ್ಯರವರ ಕುಟುಂಬ ಭಾಗವಹಿಸಿತ್ತು. ಇಡೀ ಕಾರ್ಯಕ್ರಮವನ್ನು ನಿರೂಪಿಸಿದರು.

# ಮಾರ್ಚ್ 8ರಂ"ಮಹಿಳಾ ಹಕ್ಕುಗಳಿಗಾಗಿ ನಡೆಸಿದ ಹೋರಾಟದ ದಿನ"

ತುಮಕೂರು : 1910ರ ಮಾರ್ಚ್ 8ರಂದು ಸಮಾನ ವೇತನ, ಭದ್ರತೆ, ಕೆಲಸದ ಅವಧಿಯ ನಿಗಧೀಕರಣಕ್ಕಾಗಿ ಮಹಿಳೆಯರು ನಡೆಸಿದ ಹೋರಾಟ ಪ್ರಪಂಚದ ಇತಿಹಾಸದಲ್ಲಿ ಹೊಸ ದಾಖಲೆ ಬರೆದಿದ್ದು ಜರ್ಮನಿಯ ಸಾಮಾಜಿಕ ಕಾರ್ಯಕರ್ತೆ ಕ್ಲಾರಾ ಜೆಟ್ಕಿನ್ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಬೇಕೆಂದು ಆ ಹೋರಾಟದಲ್ಲಿ ಪ್ರಸ್ತಾಪಿಸಿದಾಗ ಹದಿನೇಳು ದೇಶಗಳ ಮಹಿಳಾ ಪ್ರತಿನಿಧಿಗಳು ಒಪ್ಪಿಕೊಂಡು ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಅದನ್ನು ಆಚರಿಸಿಕೊಂಡು ಬದಲಾಗುತ್ತಿದ್ದು ಈ ದಿನ ಮಹಿಳೆಯರ ಹಕ್ಕುಗಳ ಹೋರಾಟದ ದಿನವಾಗಿದೆ. ಎಂದು ತುಮಕೂರು ಮಹಾನಗರ ಪಾಲಿಕೆ ಆಯುಕ್ತರಾದ ಸುಪ್ರಿಯಾ ಬಣಗಾರ್ ನುಡಿದರು.
ಅವರು ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪದವಿ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.
ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯ ಪಾತ್ರ ಮುಖ್ಯವಾಗಿರುತ್ತದೆ. ಆಕೆ ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ ಬಾಳಿಗೆ ಬೆಳಕಾಗುತ್ತಾಳೆ ವೈಯಕ್ತಿಕವಾಗಿ ಮನೆಯ ಸಂಸಾರದ ಪೂರ್ಣಜವಬ್ದಾರಿಯನ್ನು ಹೊರುವ ಜೊತೆಗೆ ಒಬ್ಬ ಶಿಕ್ಷಕಿಯಾಗಿ ಇಂಜಿನಿಯರ್ ಆಗಿ ಪೈಲೆಟ್ ಆಗಿ ಕೂಡಾ ತನ್ನ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾಳೆ ಸಮಾಜದ ಕಟ್ಟುಪಾಡಗಳ ಹೊರತಾಗಿಯೂ ಈಗಿನ ಆಧುನಿಕ ಪ್ರಪಂಚದಲ್ಲಿ ಆಕೆ ಸಾಧನೆಯ ಶಿಖರವನ್ನು ಮುಟ್ಟಿದ್ದಾಳೆ ಎಂದರು.
ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಯಾವುದೇ ಒಂದು ದೇಶಕ್ಕೆ ಅಥವಾ ಗುಂಪಿಗೆ ಅಥವಾ ಸಂಘಕ್ಕೆ ಸೀಮಿತವಾಗಿಲ್ಲ ಅದು ಇಡೀ ಜಗತ್ತಿನಾದ್ಯಂತ ಇರುವ ಎಲ್ಲ ಮಹಿಳೆಯರ ದಿನ ಈ ದಿನಕ್ಕೆ ವಿಶೇಷ ಮಹತ್ವವಿದೆ. ಲಿಂಗ ತಾರತಮ್ಯ ವಿರೋಧಿ ದಿನವಾದ ಇದನ್ನು ಎಲ್ಲ ಮಹಿಳೆಯರು ಧಾರ್ಮಿಕ ಹಬ್ಬದಂತೆ ಆಚರಿಸಬೇಕು ಎಂದು ಕರೆ ನೀಡಿದರು.
ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಪದವಿ ಕಾಲೇಜುಗಳ ಸಂಯೋಜನಾಧಿಕಾರಿಗಳಾದ ಡಾ. ಡಿ.ಎನ್. ಯೋಗೀಶ್ವರಪ್ಪ ಮಾತನಾಡಿ ಒಂದು ಸಂಸ್ಕೃತಿ ಪರಂಪರೆ ಉಳಿದು ಬೆಳೆಯಬೇಕಾದರೆ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದೆ ಎಂದ ಅವರು ಇಂದು ನಮ್ಮ ದೇಶದಲ್ಲಿ ನಡೆದ ಮಹಿಳೆಯರ ಸಬಲೀಕರಣದಿಂದ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಬಿಟ್ಟಿದ್ದಾಳೆ ನಮ್ಮ ದೇಶದಲ್ಲಿ ಸಂಭವಿಸಿದ ಯುದ್ದದ ವಿವರಗಳನ್ನು ಜಗತ್ತಿಗೆ ಮಾದ್ಯಮಗಳ ಮೂಲಕ ತಿಳಿಸಿದವಳು ಮಹಿಳೆಯೇ ಆಗಿದ್ದಾಳೆಂಬುದು ನಮ್ಮ ಹೆಮ್ಮೆ ವಿಷಯ ಎಂದರು.
ಭಾರತೀಯ ಸಂಸ್ಕೃತಿಯ ರಾಯಭಾರಿ ಆಗಿರುವ ನಮ್ಮ ದೇಶದ ಮಹಿಳೆಗೆ ಮಾತೃತ್ವ ಮತ್ತು ಕತೃತ್ವ ಶಕ್ತಿ ಇದ್ದು ಯಾವುದೇ ಕೆಲಸವನ್ನು ಸಮರ್ಥವಾಗಿ ನಿಭಾಯಿಸಬಲ್ಲಳು ಇಂದಿನ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಾಗಲೀ ಅಥವಾ ಇನ್ನಾವುದೇ ಪರೀಕ್ಷೆಗಳಲ್ಲಾಗಲೀ ಮಹಿಳೆಯರೇ ಅತಿ ಹೆಚ್ಚು ಸಂಖ್ಯೆಯಲ್ಲಿ ಉತ್ತೀರ್ಣರಾಗುತ್ತಿದ್ದರೂ ಶಾಸಕಾಂಗ ಕ್ಷೇತ್ರದಲ್ಲಿ ಪುರುಷರು ಅವಳನ್ನು ಪ್ರೋತ್ಸಾಹಿಸದಿರುವುದು ವಿಷಾದಕರ ಸಂಗತಿಯಾಗಿದೆ ಎಂದರು.
ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ ಹೆಚ್. ಎಂ.ದಕ್ಷಿಣಾಮೂರ್ತಿ ಮಾತನಾಡಿ ವಿದ್ಯಾರ್ಥಿನಿಯರು ತಮ್ಮ ಅಧ್ಯಯನದೊಂದಿಗೆ ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಸದಾ ಅಧ್ಯಯನ ಶೀಲರಾಗಿ ಮುಂಬರುವ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಿ ಹೆಚ್ಚು ಅಂಕಗಳನ್ನು ಗಳಿಸಿ ತಂದೆ ತಾಯಿ ಮತ್ತು ನಿಮಗೆ ಶಿಕ್ಷಣ ನೀಡಿದ ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಬೇಕು ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಯಿತು ಹಾಗೂ ಮಹಿಳಾ ಸಬಲೀಕರಣ ಘಟಕದ ವತಿಯಿಂದ ಎಂಬ್ರಾಯಿಡಿರಿ ಕಸುತಿ ಕೆಲಸದಲ್ಲಿ ತರಭೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು.
ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕಿ ಕೆ.ಪಿ.ಶೀಲಾ ವಿದ್ಯಾರ್ಥಿಗಳಿಗೆ ಎಂಬ್ರಾಯಿಡಿರಿ ಕಸುತಿ ಕೆಲಸದ ತರಭೇತಿ ನೀಡಿದ ಐಶ್ವರ್ಯ ಹಾಜರಿದ್ದರು. ಮಹಿಳಾ ಸಬಲೀಕರಣ ಘಟಕದ ಸಂಚಾಲಕರಾದ ಪುನೀತ ಸ್ವಾಗತಿಸಿದರು ವಿನುತಾ ವಂದಿಸಿದರು ಡಾ ನಳಿನ ಎನ್, ಹರ್ಷ, ಕಾವ್ಯ, ಪ್ರೇಮ, ಹರ್ಷಿಣಿ ಮೊದಲಾದವರು ಪಾಲ್ಗೊಂಡಿದರು.

# ಸಂಪೂರ್ಣ ರಾಮಾಯಣದ ನಾಟಕ ದರ್ಶನ

ತುಮಕೂರು: ಕೊರಟಗೆರೆ ತಾಲ್ಲೂಕು ಸಿ.ಎನ್. ದುರ್ಗ ಹೋಬಳಿ ಕಬ್ಬಿಗೆರೆಯಲ್ಲಿ ಪುರಾಣ ಪ್ರಾತಿನಿಧಿಕ ಸಂಪೂರ್ಣ ರಾಮಾಯಣದ ನಾಟಕಗಳ ದರ್ಶನವನ್ನು ಹವ್ಯಾಸಿ ರಂಗ ಪರಂಪರೆ ನಿರಂತರ ಸಾಂಸ್ಕೃತಿಕ ಉತ್ಸವ ಯಶಸ್ವಿ ಸಂಗೀತ ಪ್ರಿಯ ರಂಗಭೂಮಿ ಕಲಾಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.




ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಡಾ. ಕೆ. ನಾಗಣ್ಣ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಪೌರಾಣಿಕನಾಟಕಗಳ ಪ್ರದರ್ಶನ ಬಹುಸಂಖ್ಯೆಯಲ್ಲಿ ಪ್ರದರ್ಶನಗೊಂಡು ಹಳ್ಳಿಹಳ್ಳಿಗಳಲ್ಲಿ ಸಾಂಸ್ಕೃತಿಕ ಮನಸ್ಸುಗಳು ಕಲಾ ಪ್ರೋತ್ಸಾಹದಾಯಕವಾದ ಕೆಲಸ ಮಾಡುತ್ತಿರುವುದು ಅಭಿನಂದನೀಯ ಎಂದರು.
ಈಗಾಗಲೇ ಜಿಲ್ಲೆಯಲ್ಲಿ ಅನೇಕ ಸಾಂಸ್ಕೃತಿಕ ಉತ್ಸವಗಳನ್ನು ರೂಪಿಸುತ್ತಿರುವುದು

# ದುಷ್ಕರ್ಮಿಗಳಿಂದ ಗುಜರಿ ವ್ಯಾಪಾರಿ ಹತ್ಯೆ:

ತಿಪಟೂರು : ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ರಂಗಾಪುರ ರಸ್ತೆ ಚಿಕ್ಕಕೊಟ್ಟಿಗಿಹಳ್ಳಿ ಗ್ರಾಮದ ಬಳಿ ನಡೆದಿದ್ದ ಗುಜರಿ ವ್ಯಾಪಾರಿಯ ಹತ್ಯೆ ಮಾಡಿದ ಆರೋಪಿಗಳನ್ನ ಬಂಧಿಸುವಲ್ಲಿ ಗ್ರಾಮಾಂತರ ಗ್ರಾಮಾಂತರ ಯಶಸ್ವಿಯಾಗಿದ್ದಾರೆ.ದಿನಾಂಕ : 04.03.2026 ರಂದು ತಿಪಟೂರು ತಾಲ್ಲೂಕು ರಂಗಾಪುರ ಸಮೀಪದ ಚಿಕ್ಕಕೊಟ್ಟಿಗೆಹಳ್ಳಿ ಬಳಿ ತಿಪಟೂರು ನಗರ ಗಾಂಧೀನಗರದ ವಾಸಿ ಗುಜರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದ ಮನ್ಸೂರ್ ಪಾಷ ಬಿನ್ ಲೇಟ್ ಸಜ್ಜಾದ್ , 31 ವರ್ಷ , ರವರನ್ನು ಯಾರೂ ದುಷ್ಕರ್ಮಿಗಳು ಯಾವುದೋ ಕಾರಣಕ್ಕಾಗಿ ಕೊಲೆಮಾಡಿದ ಬಗ್ಗೆ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ನಂ. 23/2026 ಕಲಂ 103 BNS ರೀತ್ಯಾ ಪ್ರಕರಣ ದಾಖಲಾಗಿತ್ತು.ಈ ' ಪ್ರಕರಣವನ್ನು ಪತ್ತೆಹಚ್ಚಲು ಮಾನ್ಯ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅಶೋಕ್.ಕೆ.ವಿ . ರವರ ಮಾರ್ಗದರ್ಶನದಲ್ಲಿ ಮತ್ತು ಹೆಚ್ಚುವರಿ ಪೊಲೀಸ್ ಅಧೀಕ್ಷಕರುಗಳಾದ ಸಿ.ಗೋಪಾಲ್ ಮತ್ತು ಪುರುಷೋತ್ತಮ.ಎಂ.ಎಲ್.ರವರ ನೇತೃತ್ವದಲ್ಲಿ, ತಿಪಟೂರು ಉಪವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಎಂ.ಹೆಚ್.ಉಮೇಶ್ ರವರ ಮಾರ್ಗಸೂಚನೆ ಮೇರೆಗೆ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಐ. ರವರಾದ ವೆಂಕಟೇಶ್.ಸಿ ಮತ್ತು ಚಂದ್ರಶೇಖರ್.ಟಿ.ಕೆ . ಸಿ.ಪಿ.ಐ. , ತಿಪಟೂರು ಗ್ರಾ , ರವಿಕುಮಾರ್ ಪಿ.ಐ. ತಿಪಟೂರು ನಗರ , ರಾಮಣ್ಣ.ಸಿ , ಪಿ.ಎಸ್.ಐ. , ನಾಗರಾಜು ಪಿ.ಎಸ್.ಐ. ಚೇತನ್ , ದಕ್ಷಿಣಮೂರ್ತಿ , ಇಮ್ರಾನ್ ಹಾಗೂ ತುಮಕೂರು ಜಿಲ್ಲಾ ಪೊಲೀಸ್ ಕಛೇರಿಯ ನರಸಿಂಹರಾಜು , ರಮೇಶ್ ಒಳಗೊಂಡ ತಂಡದವರು ಪ್ರಕರಣದ ಆರೋಪಿತರ ಪತ್ತೆ ಕಾರ್ಯವನ್ನು ಕೈಗೊಂಡು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಆರೋಪಿತರಾದ. ಧನರಾಜ್ ಹೆಚ್.ಟಿ. @ ಧನು ಬಿನ್ ತಿಮ್ಮಪ್ಪ , 24 ವರ್ಷ , ಹುಚ್ಚನಹಟ್ಟಿ ಗ್ರಾಮ , ಅಜ್ಜಂಪುರ ತಾಲ್ಲೂಕು , ಚಿಕ್ಕಮಗಳೂರುವೆಂಕಟೇಶ ಬಿನ್ ರವಿ , 24 ವರ್ಷ , ದಾಸರಹಟ್ಟಿ ಗ್ರಾಮ , ಅಜ್ಜಂಪುರ ತಾಲ್ಲೂಕು ,ಚಿಕ್ಕಮಗಳೂರುದರ್ಶನ್ ಬಿನ್ ಪ್ರಕಾಶ್ , 24 ವರ್ಷ , ದಾಸರಹಟ್ಟಿ ಗ್ರಾಮ , ಅಜ್ಜಂಪುರ ತಾಲ್ಲೂಕು , ಚಿಕ್ಕಮಗಳೂರು,ಫರ್ಜಾನ ಕೋಂ ಮನ್ಸೂರ್ ಪಾಷ , 31 ವರ್ಷ , ಗಾಂಧಿನಗರ , ತಿಪಟೂರು ಟೌನ್ . ರವರನ್ನು ದಸ್ತಗಿರಿ ಮಾಡಿ ಕೃತ್ಯಕ್ಕೆ ಉಪಯೋಗಿಸಿದ ಬೊಲೆರೋ ಪಿಕಪ್ ವಾಹನ , ಪಲ್ಸರ್ ಬೈಕ್ ಮತ್ತು ಇತರೆ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ .

# ಸಂತೆ ಮೈದಾನ ಶಾಲೆಯಲ್ಲಿ ಚಿಣ್ಣರ ಚಿಲಿಪಿಲಿ ಶಾಲಾ ವಾರ್ಷಿಕೋತ್ಸವ

ತಿಪಟೂರು : ತಾಲ್ಲೂಕಿನ ಕಿಬ್ಬನಹಳ್ಳಿ ಹೋಬಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕರಡಾಳು ಸಂತೆ ಮೈದಾನ ಶಾಲೆಯಲ್ಲಿ ಚಿಣ್ಣರ ಚಿಲಿಪಿಲಿ ಶಾಲಾ ವಾರ್ಷಿಕೋತ್ಸವ ಹಾಗೂ ಸಂಪೂರ್ಣ ದಾನಿಗಳ ಸಹಕಾರದಿಂದ ನಿರ್ಮಿಸಿರುವ ಜ್ಞಾನ ಸೂರ್ಯ ಶಾಲಾ ಕಲಾಮಂದಿರ ಶಾಲಾ ಪ್ರವೇಶ ದ್ವಾರ ಹಾಗೂ ಸಿಸಿ ರಸ್ತೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು ಈ ಎಲ್ಲಾ ಕಾರ್ಯಕ್ರಮಗಳನ್ನು ತಾಲೂಕಿನ ಜನಪ್ರಿಯ ಶಾಸಕರಾದ ಕೆ ಷಡಕ್ಷರಿ ಅವರು ಉದ್ಘಾಟನೆ ಮಾಡಬೇಕಿತ್ತು, ಆದರೆ ಸನ್ಮಾನ್ಯರು ಬಜೆಟ್ ಅಧಿವೇಶನದಲ್ಲಿ ಭಾಗವಹಿಸಿದ್ದ ಕಾರಣ ಸನ್ಮಾನ್ಯರ ಅನುಪಸ್ಥಿತಿಯಲ್ಲಿ ಜ್ಞಾನ ಸೂರ್ಯ ಶಾಲಾ ಕಲಾಮಂದಿರಕ್ಕೆ ಸಂಪೂರ್ಣ ಕಬ್ಬಿಣ ಹಾಗೂ ಶೀಟ್ ಗಳನ್ನ ಕೊಡುಗೆ ನೀಡಿ ಕಲಾಮಂದಿರ ಸಾಕಾರಗೊಳ್ಳಲು ಸಹಕರಿಸಿದ ಕೆಪಿಸಿಸಿ ಸದಸ್ಯರಾದಂತಹ ಡಾ// ವಿ ಯೋಗೇಶ್ ಕೆ ಪಿ ಸಿ ಸಿ ಸದಸ್ಯರು ಸದರಿ ಕಾರ್ಯಕ್ರಮ ಗಳನ್ನು ಉದ್ಘಾಟನೆ ಮಾಡಿದರು. ಸರ್ಕಾರಿ ಶಾಲೆಗಳು ಈ ರೀತಿ ಎಸ್ಡಿಎಂಸಿ ಗ್ರಾಮಸ್ಥರು ಪೋಷಕರು ಹಾಗೂ ದಾನಿಗಳ ನೆರವನ್ನು ಪಡೆದು ಶಾಲೆಗಳನ್ನ ಸಬಲೀಕರಣ ಗೊಳಿಸಿದರೆ ಯಾವುದೇ ಸರ್ಕಾರಿ ಶಾಲೆ ಮುಚ್ಚುವ ಹಂತಕ್ಕೆ ಬರುವುದಿಲ್ಲ ಎಂದು ತಿಳಿಸಿದರು ಹಾಗೂ ಶಾಲೆಯ ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು.
ಇದೇ ಸಂದರ್ಭದಲ್ಲಿ ತಿಪಟೂರು ತಾಲೂಕ್ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಾದ ಎಂ ಎಂ
ಉಮೇಶ್ ಗೌಡ ರವರು ಮಾತನಾಡಿ. ಈ ಶಾಲೆ ವರ್ಷದಿಂದ ವರ್ಷಕ್ಕೆ ಪ್ರಗತಿ ಹೊಂದುತ್ತಾ ಬಂದಿದ್ದು ಹತ್ತು ವರ್ಷಗಳ ಹಿಂದೆ ಒಂದು ಎರಡು ಮಗು ಇದ್ದ ಶಾಲೆ ಇಂದು 19 ದಾಖಲೆಯನ್ನು ಹೊಂದಿ ಉತ್ತಮ ಪ್ರಗತಿಯತ್ತ ಸಾಗಲು ಈ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿದ ಹಿಂದಿನಮುಖ್ಯ ಶಿಕ್ಷಕರಾದ ಛಾಯಾ .ಎನ್ ಹಾಗೂ



ಈಗ ಮುಖ್ಯ ಶಿಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪಟ್ಟಾಭಿರಾಮು ರವರ ಶ್ರಮದ ಫಲವಾಗಿ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಗೆ ಭಾಜನರಾಗಿರುವುದು ಈ ಶಾಲೆಯ ಸರ್ವಾಂಗೀಣ ಪ್ರಗತಿಗೆ ಕನ್ನಡಿ ಹಿಡಿದಂತೆ ಆಗಿದೆ ಆದ ಕಾರಣ ಪೋಷಕರು ಇನ್ನಾದರೂ ಖಾಸಗಿ ಶಾಲೆಗಳ ವ್ಯಾಮೋಹವನ್ನು ಬಿಟ್ಟು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನ
ದಾಖಲಿಸಬೇಕೆಂದು ಕೋರಿದರು.
ಇದೇ ಸಂದರ್ಭದಲ್ಲಿ ಮಾತನಾಡಿದ ಮುಖ್ಯ ಶಿಕ್ಷಕ ಟಿ.ಕೆ ಪಟ್ಟಾಭಿರಾಮ ದಾನಿಗಳ ಸಹಕಾರದಿಂದ ನೀಡುತ್ತಾ ಬಂದಿದ್ದು ಪ್ರತಿ ವರ್ಷವೂ ಮಕ್ಕಳ ಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಚಿಣ್ಣರ ಚಿಲಿಪಿಲಿ ಎಂಬ ವಿನೂತನ ಶಾಲಾ ವಾರ್ಷಿಕೋತ್ಸವವನ್ನು ಎಸ್ ಡಿ ಎಂ ಸಿ ಗ್ರಾಮಸ್ಥರು ಪೋಷಕರ ಸಹಕಾರದಿಂದ ನಡೆಸುತ್ತಾ ಬಂದಿದ್ದೇವೆ ನಿಮ್ಮೆಲ್ಲರ
ಸಹಕಾರಕ್ಕೆ ತುಂಬು ಹೃದಯದ ಧನ್ಯವಾದವನ್ನ ಅರ್ಪಿಸುತ್ತೇನೆ ಎಂದು ತಿಳಿಸಿದರು ಹಾಗೂ ಕಡ್ಡಾಯವಾಗಿ ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲು ಮಾಡಬೇಕೆಂದು ಕೋರಿದರು.
ಶಾಲಾ ಎಸ್ಡಿಎಂಸಿ ಅಧ್ಯಕ್ಷರಾದ ಎನ್ ನರಸಿಂಹಮೂರ್ತಿ ಮಾತನಾಡಿ ನಮ್ಮ ಶಾಲೆ ಸರ್ವಾಂಗ ಸುಂದರವಾಗಿ ರೂಪಗೊಳ್ಳಲು ಸಹಕರಿಸಿದ ಎಲ್ಲಾ ದಾನಿಗಳಿಗೆ ಗ್ರಾಮಸ್ಥರಿಗೆ ಪೋಷಕರಿಗೆ ಹಾಗೂ ಶಿಕ್ಷಕರಿಗೆ ಅಭಿನಂದನೆಗಳನ್ನು ತಿಳಿಸಿದರು.
ಕಾರ್ಯಕ್ರಮದಲ್ಲಿ ದಾನಿಗಳಾದ ಡಾಕ್ಟರ್ ವಿ ಯೋಗೇಶ್ ಪ್ರಥಮ ದರ್ಜೆ ಗುತ್ತಿಗೆದಾರರಾದ ಮೈಲಾರಯ್ಯ ಈ ಶಾಲೆಯ ಹಳೆ ವಿದ್ಯಾರ್ಥಿ ಹಾಗೂ ಶ್ರೀ ಗುರು ಗೋಲ್ಡ್ ಬಯ್ಯರ್ಸ್ ಇದರ ಮಾಲೀಕರಾದ ದೀಪು (ಆನಂದ್ )ಹಾಗೂ ಜಯ ಕರ್ನಾಟಕ ಮಲ್ಲೇಶ್ವರಂ ವಿ ಕ್ಷೇತ್ರದ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಬೆಂಗಳೂರು ಉತ್ತರ ಪ್ರಧಾನ ಕಾರ್ಯದರ್ಶಿಗಳು ಆದಂತಹ ಕೆ .ಕಾರ್ತಿಕ್ ಗೌಡ ರವರು ಶಿಕ್ಷಣ ಸಂಯೋಜಕರಾದ ಬಿ ಆರ್ ಪಿ ಪ್ರಸನ್ನ ಸಿಆರ್ಪಿ ವಸಂತ ಕುಮಾರ್ ಸಹ ಶಿಕ್ಷಕಿ ಮೀನಾಕ್ಷಮ್ಮರವರನ್ನು ಸನ್ಮಾನಿಸಲಾಯಿತು.
ಈ ಕಾರ್ಯಕ್ರಮದಲ್ಲಿ ಶಿಕ್ಷಕರ ಸಂಘದ ಸಹ ಕಾರ್ಯದರ್ಶಿ, ಸಿ ಎಸ್ ನಾಗರಾಜು .ಎಸ್ ಡಿ ಎಂ ಸಿ ಉಪಾ ಧ್ಯಕ್ಷ ಸ್ವರೂಪ್ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕೆ.ಬಿ.ವಿರೂಪಾಕ್ಷ ಮಾಜಿ ಗ್ರಾಮ ಪಂಚಾಯ್ತಿ ಸದಸ್ಯ ಶಂಕರಯ್ಯ ಕೆ.ಡಿ.ಚಂದ್ರಶೇಖರ್ ಕುಶಲಕರ್ಮಿ ಕೆಂಪಾಚಾರ್ ಸಿಆರ್ಪಿ ಹರೀಶ್ ಮಡೇ ನೂರ್ ಶಾಲೆಯ ಮುಖ್ಯ ಲೋಕೇಶ್ ಗ್ರಾಮಸ್ಥರು ಪೋಷಕರು ಹಿರಿಯ ವಿದ್ಯಾರ್ಥಿಗಳು ಹಾಗೂ ಎಲ್ಲರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಸದರಿ ಕಾರ್ಯಕ್ರಮ ವನ್ನು ಸಹ ಶಿಕ್ಷಕಿ ಮೀನಾಕ್ಷಮ್ಮ ಸ್ವಾಗತಿಸಿದ್ದರು."

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

## ಸಪಿ ನ್ಯೂಸ್ ಸುದ್ದಿ

## ಮಾ. 13ರಂದು ಇ–ಆಸ್ತಿ ಆಂದೋಲನ

ತುಮಕೂರು: ಕಂದಾಯ ಶಾಖೆಯ ವತಿಯಿಂದ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.31 ರಿಂದ 35ರಲ್ಲಿ ಬರುವ ಎಲ್ಲಾ ಆಸ್ತಿ ಮಾಲೀಕರು/ಆಸ್ತಿ ತೆರಿಗೆದಾರರಿಗಾಗಿ ಮಾರ್ಚ್ 13ರಂದು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಸಿದ್ದರಾಮೇಶ್ವರ ಬಡಾವಣೆಯ ಬಸವ ಭವನದಲ್ಲಿ ಇ–ಆಸ್ತಿ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
ಆಸಕ್ತರು ನೋಂದಾಯಿತ ಕ್ರಯಪತ್ರ/ ದಾನಪತ್ರ/ ವಿಭಾಗಪತ್ರ/ ವಿಲ್ ಪತ್ರ, ಭೂಪರಿವರ್ತನಾ ಆದೇಶ ಪ್ರತಿ, ಲೇಔಟ್ ಪ್ರತಿ ಅಥವಾ ಎಂ.ಎ.ಆರ್.19ರ ನಕಲು ಪ್ರತಿ, 01–04–2004ರಿಂದ ಪ್ರಸ್ತುತ ಸಾಲಿನವರೆಗೆ ಇ.ಸಿ.–15, ಸ್ವತ್ತಿನ ಮಾಲೀಕರ ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಪ್ರಸ್ತುತ ಸಾಲಿನ ಕಂದಾಯ ಪಾವತಿಸಿರುವ ರಸೀದಿ ಸೇರಿದಂತೆ ಸ್ವತ್ತಿಗೆ ಅವಶ್ಯವಿರುವ ದಾಖಲೆಗಳೊಂದಿಗೆ ಹಾಜರಾಗಿ ತಮ್ಮ ಸ್ವತ್ತಿಗೆ ಇ–ಆಸ್ತಿಯನ್ನು ಪಡೆದುಕೊಂಡು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪಾಲಿಕೆ ಆಯುಕ್ತ ಶುಭ ಮನವಿ ಮಾಡಿದ್ದಾರೆ.

## ಮಹಿಳಾ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ತುಮಕೂರು:ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ: ನಾಗಲಕ್ಷ್ಮೀ ಚೌಧರಿ ಅವರು ಮಾರ್ಚ್ 12ರಂದು ಬೆಳಿಗ್ಗೆ 9 ಗಂಟೆಗೆ ಸರ್ಕಾರಿ ವಾಹನದ ಮೂಲಕ ಬೆಂಗಳೂರಿನಿಂದ ಹೊರಟು ತುಮಕೂರಿಗೆ ಆಗಮಿಸುವರು.
ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಬಾಲಭವನದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದವರ ನಿರ್ದೇಶನದಂತೆ ಹಮ್ಮಿಕೊಂಡಿರುವ ಜನ್ ಸುನ್ವಾಯಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3.30 ಪತ್ರಿಕಾಗೋಷ್ಠಿ ನಡೆಸುವರು. ಸಂಜೆ 4 ಗಂಟೆಗೆ ತುಮಕೂರಿನಿಂದ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

## ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಆಗಿ ಅರುಣ್ ಆಯ್ಕೆ



ತುಮಕೂರು: ಕರ್ನಾಟಕ ರಕ್ಷಣಾ ವೇದಿಕೆ(ನಾರಾಯಣಗೌಡ ಬಣ)ಯ ತುಮಕೂರು ಜಿಲ್ಲಾಧ್ಯಕ್ಷರಾಗಿ ಅರುಣ್ ಕೃಷ್ಣಯ್ಯ ಹಾಗೂ ಜಿಲ್ಲಾ ಗೌರವಾಧ್ಯಕ್ಷರಾಗಿ ರಂಗಸ್ವಾಮಿ ನೇಮಕವಾಗಿದ್ದಾರೆ.
ಕರ್ನಾಟಕರಕ್ಷಣಾವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರು ಇವರನ್ನು ನೇಮಕ ಮಾಡಿ, ನೇಮಕಾತಿ ಪತ್ರ ವಿತರಿಸಿದರು.
ಕನ್ನಡ ನಾಡು, ನುಡಿ, ನೆಲ, ಜಲ, ಕನ್ನಡಿಗರ ಪರವಾಗಿ ಕೆಲಸ ಮಾಡಬೇಕು. ನಾಡುನುಡಿ, ಕನ್ನಡಿಗರಿಗೆ ಯಾವುದೇ ತೊಂದರೆಯಾದರೆ ಹೋರಾಟಕ್ಕೆ ಸಿದ್ಧರಾಗಬೇಕು. ನಮ್ಮ ಭಾಷೆ, ನೆಲ, ಕನ್ನಡಿಗರ ರಕ್ಷಣೆಗೆ ನಾವೆಲ್ಲರೂ ಸಂಕಲ್ಪ ಮಾಡಬೇಕು ಎಂದು ಟಿ.ಎ.ನಾರಾಯಣಗೌಡರು ಈ ವೇಳೆ ನೂತನ ಪದಾಧಿಕಾರಿಗಳಿಗೆ ತಿಳಿಸಿ, ತುಮಕೂರು ಜಿಲ್ಲೆಯಲ್ಲೂ ಸಕ್ರಿಯವಾಗಿ ಕನ್ನಡಪರ ಕೆಲಸ ಮಾಡಬೇಕು ಎಂದು ಹೇಳಿದರು.
ಜಿಲ್ಲಾಧ್ಯಕ್ಷ ಅರುಣ್ ಕೃಷ್ಣಯ್ಯ, ಜಿಲ್ಲಾ ಗೌರವಾಧ್ಯಕ್ಷ ರಂಗಸ್ವಾಮಿ ಹಾಗೂ ರಾಜ್ಯ ಘಟಕ ಪದಾಧಿಕಾರಿಗಳು ಈ ವೇಳೆ ಹಾಜರಿದ್ದರು.

## ವೃದ್ದೆಯನ್ನ ಉಸಿರುಗಟ್ಟಿಸಿ ಕೊಲೆಗೈದು ಚಿನ್ನಾಭರಣ ದೋಚಿ ಪರಾರಿ

ಕುಣಿಗಲ್ : ಒಂಟಿ ವೃದ್ದೆಯನ್ನ ಉಸಿರುಗಟ್ಟಿಸಿ ಕೊಲೆಗೈದು ಚಿನ್ನಾಭರಣ ದೋಚಿ ಪರಾರಿಯಾದ ಕಳ್ಳರು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬೇಟಿ ಪ್ರಕರಣ ದಾಖಲು.



ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿ ಉಜ್ಜನಿ ಗ್ರಾಮದಲ್ಲಿ ಒಂಟಿಯಾಗಿ ವಾಸವಿದ್ದ ವೃದ್ದೆಯನ್ನು ಉಸಿರುಗಟ್ಟಿಸಿ ಕೊಲೆಗೈದು ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ ನಾಗಮ್ಮ (80) ಮೃತ ಮಹಿಳೆ,ಅಕ್ಕ ಪಕ್ಕದ ಮನೆಯವರು ವೃದ್ದೆ ನಾಗಮ್ಮ ಮನೆಯಾಚೆಗೆ ಬಾರದೆ ಇರುವುದನ್ನು ಗಮನಿಸಿ ಕುಟುಂಬಸ್ಥರಿಗೆ ಕರೆ ಮಾಡಿ ನಿಮ್ಮ ತಾಯಿ ಬೆಂಗಳೂರಿಗೆ ಬಂದಿದ್ದಾರ ಎಂದು ವಿಚಾರಿಸಿದ್ದಾರೆ ಊರಿನಲ್ಲೆ ಇದ್ದಾರೆ ಬೆಂಗಳೂರಿಗೆ ಬಂದಿಲ್ಲ ಎಂದು ಹೇಳಿದ ಕೂಡಲೆ ಅನುಮಾನಗೊಂಡ ಸ್ಥಳಿಯರು ಮನೆಯ ಕಿಟಕಿ ಹೊಡೆದು ನೋಡಿದಾಗ ನಾಗಮ್ಮ ಮನೆಯಲ್ಲೆ ಮಂಚದಮೇಲೆ ಮಲಗಿದ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ ಬಳಿಕ ಬಾಗಿಲು ಹೊಡೆದು ನೋಡಿದಾಗ ಸಾವನ್ನಪ್ಪಿರುವುದು ತಿಳಿದುಬಂದಿದೆ ಸ್ಥಳಕ್ಕೆ ಹುಲಿಯೂರುದುರ್ಗ ಪೊಲೀಸರು ಶ್ವಾನದಳ, ಬೆರಳಚ್ಚು ತಂಡ ಭೇಟಿ ನೀಡಿ ಪರಿಶೀಲಿಸಿ ತನಿಖೆ ಕೈಗೊಂಡಿದ್ದಾರೆ.

## ಸ್ವಚ್ಛತಾ ನಿಯಮಗಳನ್ನು ಪಾಲಿಸಲು ಮನವಿ

ತುಮಕೂರು: ಸಾರ್ವಜನಿಕರು ಆರೋಗ್ಯ ಹಾಗೂ ಸುರಕ್ಷತೆ ದೃಷ್ಠಿಯಿಂದ ಸ್ವಚ್ಛತಾ ನಿಯಮಗಳನ್ನು ಪಾಲಿಸಬೇಕೆಂದು ಪಾಲಿಕೆ ಆಯುಕ್ತರಾದ ಶುಭ ಮನವಿ ಮಾಡಿದ್ದಾರೆ.
ಸಾರ್ವಜನಿಕರು ತಮ್ಮ ಮನೆಗಳಲ್ಲಿ ನೀರನ್ನು ಸಂಗ್ರಹಿಸುವ ಸಂಪ್‌ಗಳನ್ನು ಸ್ವಚ್ಛಗೊಳಿಸಿ ಉತ್ತಮ ಸ್ಥಿತಿಯಲ್ಲಿ ಇರಿಸಿಕೊಳ್ಳಬೇಕು. ಮನೆಯ ಸಂಪ್‌ಗಳಲ್ಲಿ ನೀರು ಸೀಪೇಜ್ ಆಗದಂತೆ ಸಂಪೂರ್ಣವಾಗಿ ಸೀಲ್ಡ್ ಆಗಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.